# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಜನವರಿ 11, 2025

ಸಂಪುಟ : 51 ಸಂಚಿಕೆ : 239 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್‌ನ ಶ್ರೀಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ಸ್ವಾಮಿಗೆ ವಿಶೇಷ ಅಲಂಕಾರ

## ಆಶಾ ಕಾರ್ಯಕರ್ತೆಯರಿಗೆ 10 ಸಾವಿರ

ಮೈಸೂರು, ಜ.10- ಪ್ರತಿಭಟನಾನಿರತ ಆಶಾ ಕಾರ್ಯಕರ್ತೆಯರೊಂದಿಗೆ ಮಾತನಾಡಿದ್ದೇನೆ. ಪ್ರತಿ ತಿಂಗಳು 10 ಸಾವಿರ ರೂ. ಬರುವಂತೆ ಮಾಡುತ್ತೇವೆ. ಪ್ರತಿಭಟನೆ ವಾಪಸ್ ತೆಗೆದುಕೊಳ್ಳಿ ಎಂದಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ದೆಹಲಿಯಲ್ಲಿ ಎಂಎಸ್‌ಪಿ ಕಾನೂನು ಜಾರಿಗೆ ರೈತರು ಪ್ರತಿಭಟಿಸುತ್ತಿದ್ದು, ಬೇಡಿಕೆಗಳಿಗೆ ಕೇಂದ್ರ ಸರ್ಕಾರ ಮಣಿಯುತ್ತಿಲ್ಲ. ಅದಕ್ಕೆ ಮಾನವೀಯತೆಯೇ ಇಲ್ಲ. ಸಾವಿರಾರು ರೈತರು ಪ್ರತಿಭಟನೆ ವೇಳೆ ಮೃತಪಟ್ಟಿದ್ದಾರೆ ಎಂದರು.

ಶರಣಾಗತರಾದ ನಕ್ಸಲರ ಕುರಿತು ಮಾತನಾಡಿದ ಅವರು, ಶಸ್ತ್ರಾಸ್ತ್ರಗಳು ಎಲ್ಲಿವೆಯೆಂದು ಗೊತ್ತಿದೆ. ಮಹಜರ್ ಮಾಡಿ ತೆಗೆದುಕೊಂಡು (4ನೇ ಪುಟಕ್ಕೆ)


ಅತಿ ಮಾರಾಟ ಮತ್ತು ದೊಡ್ಡ ರಿಯಾಯ್ತಿಗಳು ಹೊಸ ವಿನ್ಯಾಸ ಮತ್ತು ಸಂಗ್ರಹಗಳೊಂದಿಗೆ

FURNITURE & HOME INTERIOR EXPO

10 ಶುಕ್ರ 11 ಶನಿ 12 ಭಾನು 13 ಸೋಮ ಜನವರಿ 2025

ಸಮಯ ಬೆಳಿಗ್ಗೆ 10.30 ರಿಂದ ರಾತ್ರಿ 8.30ರವರೆಗೆ

ಬಾಪೂಜಿ ಬ್ಯಾಂಕ್ ಸಮುದಾಯ ಭವನ, ಶಾಮನೂರು, ದಾವಣಗೆರೆ.



ವಿಶಾಲವಾದ ಕಾರ್ ಪಾರ್ಕಿಂಗ್ | ಉಚಿತ ಪ್ರವೇಶ | ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ✆ 91 96111 76669 / 98866 65857


## ಮಾರ್ಚ್ 1ರಿಂದ ಪಿಯು, 21ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ



ಬೆಂಗಳೂರು, ಜ.10- ದ್ವಿತೀಯ ಪಿಯು ಹಾಗೂ ಎಸ್‌ಎಸ್‌ಎಲ್‌ಸಿ 2024-25ನೇ ಸಾಲಿನ ಪರೀಕ್ಷೆಗಳ ಅಂತಿಮ ವೇಳಾಪಟ್ಟಿ ಪ್ರಕಟವಾಗಿದ್ದು, ಮಾರ್ಚ್ 1ರಿಂದ ಪಿಯು, ಮಾರ್ಚ್ 21ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭವಾಗಲಿವೆ.

ದ್ವಿತೀಯ ಪಿಯು ಪರೀಕ್ಷೆ ಮಾರ್ಚ್ 20ಕ್ಕೆ ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆ ಏಪ್ರಿಲ್ 4ಕ್ಕೆ ಮುಕ್ತಾಯವಾಗಲಿವೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಹೇಳಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 21–ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ, 24–ಗಣಿತ, 26–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ, 29–ಸಮಾಜ ವಿಜ್ಞಾನ, ಏಪ್ರಿಲ್ 1–ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, 2–ವಿಜ್ಞಾನ ಹಾಗೂ ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, 4–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು ಹಾಗೂ ಎನ್‌ಎಸ್‌ಕ್ಯೂಎಫ್ (4ನೇ ಪುಟಕ್ಕೆ)






# ಕರೇಗೌಡ್ರು ಅಜ್ಜನಗೌಡ್ರು ನಿಧನ



ಹರಪನಹಳ್ಳಿ ತಾಲ್ಲೂಕು ಜಂಗಮ ತುಂಬಿಗೆರೆ ಗ್ರಾಮದ ವಾಸಿ

ದಿ|| ಕೆ.ಜಿ. ನಿಂಗಪ್ಪನವರ ಪುತ್ರ

## ಶ್ರೀ ಕರೇಗೌಡ್ರು ಅಜ್ಜನಗೌಡ್ರು

ಅವರು, ದಿನಾಂಕ 10-01-2025ರ ಶುಕ್ರವಾರ ರಾತ್ರಿ 9-45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 63 ವರ್ಷ ವಯಸ್ಸಾಗಿತ್ತು.

ಮೃತರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ದಿನಾಂಕ 11-01-2025ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಜಂಗಮ ತುಂಬಿಗೆರೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

ಕರೇಗೌಡ್ರು, ವಂಶಸ್ಥರು ಹಾಗೂ ಬಂಧುಗಳು

ಮೊ. : 96115 36299, 93800 04019
96066 73913

# ಸಂಭಾಲ್‌ನ ಜಾಮಾ ಮಸೀದಿ ಪ್ರಕರಣ: ಯಥಾಸ್ಥಿತಿಗೆ ಆದೇಶ



ನವದೆಹಲಿ, ಜ.10- ಸಂಭಾಲ್‌ನ ಜಾಮಾ ಮಸೀದಿ ನಿರ್ವಹಣಾ ಸಮಿತಿ ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಶುಕ್ರವಾರ ನೋಟಿಸ್ ಜಾರಿ ಮಾಡಿ, ಮಸೀದಿಯ ಪ್ರವೇಶ ದ್ವಾರದ ಬಳಿ ಇರುವ ಖಾಸಗಿ ಬಾವಿಗೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಂಡು ಹೋಗುವಂತೆ ಆದೇಶ ನೀಡಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರನ್ನೊಳಗೊಂಡ ನ್ಯಾಯಪೀಠವು ಬಾವಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಅನುಮತಿಯಿಲ್ಲದೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಬಾರದು ಮತ್ತು ಇನ್ನೆರಡು ವಾರಗಳಲ್ಲಿ ವಸ್ತುಸ್ಥಿತಿ ವರದಿಯನ್ನು ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದೆ.

ಶಾಹಿ ಜಾಮಾ ಮಸೀದಿಯ ನಿರ್ವಹಣಾ ಸಮಿತಿಯು ಸಲ್ಲಿಸಿದ ಅರ್ಜಿಯಲ್ಲಿ ಮಸೀದಿಯ ಸಮೀಕ್ಷೆಗೆ ವಕೀಲ ಆಯುಕ್ತರನ್ನು ನೇಮಿಸಲು ಅನುಮತಿ ನೀಡಿದ ಸಂಭಾಲ್ ಹಿರಿಯ ವಿಭಾಗದ ಸಿವಿಲ್ ನ್ಯಾಯಾಧೀಶರ ನವೆಂಬರ್ 19, 2024 ರ ಆದೇಶವನ್ನು ಪ್ರಶ್ನಿಸಿತು.

ನಿರ್ವಹಣಾ ಸಮಿತಿಯನ್ನು ಪ್ರತಿನಿಧಿಸುವ ಹಿರಿಯ ವಕೀಲ ಹುಜೆಫಾ ಅಹ್ಮದಿ, ಬಾವಿಯ ಐತಿಹಾಸಿಕ ಮಹತ್ವವನ್ನು ಒತ್ತಿ ಹೇಳಿದರು. ನಾವು ಅನಾದಿ ಕಾಲದಿಂದಲೂ ಬಾವಿಯಿಂದ ನೀರನ್ನು ಸೇದುತ್ತಿದ್ದೇವೆ. ಈ ಸ್ಥಳವನ್ನು 'ಹರಿ ಮಂದಿರ' ಎಂದು ಉಲ್ಲೇಖಿಸುವ ಮತ್ತು ಅಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ಪ್ರಾರಂಭಿಸುವ ಯೋಜನೆಗಳ ಬಗ್ಗೆ ಅಹ್ಮದಿ ಕಳವಳ ವ್ಯಕ್ತಪಡಿಸಿದರು. ಅಂತಹ ಯಾವುದೇ ಚಟುವಟಿಕೆಗಳಿಗೆ ಅವಕಾಶ ನೀಡಲಾಗುವುದಿಲ್ಲ. ದಯವಿಟ್ಟು ಸ್ಥಿತಿ ವರದಿಯನ್ನು ಸಲ್ಲಿಸಿ ಎಂದು ಸಿಜೆಐ ಹೇಳಿದರು.

ಬಾವಿಯ ಬಗ್ಗೆ ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ಸೂಚನೆಗಳನ್ನು ಜಾರಿಗೆ ತರಲಾಗುವುದಿಲ್ಲ ಎಂದು ಪೀಠ ಹೇಳಿದೆ. ಹಿಂದೂ ಪರ ಪ್ರತಿನಿಧಿಸುವ ವಕೀಲ ವಿಷ್ಣು ಶಂಕರ್ ಜೈನ್, ಬಾವಿ ಮಸೀದಿಯ ವ್ಯಾಪ್ತಿಯ ಹೊರಗಿದೆ. ಐತಿಹಾಸಿಕವಾಗಿ ಪೂಜೆಗೆ ಬಳಸಲಾಗುತ್ತಿದೆ ಎಂದು ಹೇಳಿದರು.

ಗೂಗಲ್ ನಕ್ಷೆಗಳ ಚಿತ್ರವನ್ನು ಉಲ್ಲೇಖಿಸಿ ಬಾವಿ ಮಸೀದಿ ಆವರಣದ ಒಳಗೆ ಮತ್ತು ಹೊರಗೆ ಭಾಗಶಃ ಇದೆ ಎಂದು ಅಹ್ಮದಿ ಹೇಳಿದರು, ಮಸೀದಿಯ ಮೆಟ್ಟಿಲುಗಳು/ಪ್ರವೇಶ ದ್ವಾರದ ಬಳಿ ಇರುವ ಖಾಸಗಿ ಬಾವಿಗೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆಯೇ ಎಂದು ಖಚಿತ ಪಡಿಸಿಕೊಳ್ಳಲು ನ್ಯಾಯಾಲಯದ ಸೂಕ್ತ ಅನುಮತಿಯಿಲ್ಲದೆ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದಂತೆ ಸಂಭಾಲ್ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಸೂಕ್ತ ನಿರ್ದೇಶನ ನೀಡಿ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಚಂದೌಸಿಯಲ್ಲಿರುವ ಸಂಭಾಲ್‌ನ ಹಿರಿಯ ವಿಭಾಗದ ಸಿವಿಲ್ ನ್ಯಾಯಾಧೀಶರು ನವೆಂಬರ್ 19, 2024 ರಂದು ನೀಡಿದ ಆದೇಶದ ವಿರುದ್ಧ ಅರ್ಜಿ ಸಲ್ಲಿಸಿರುವುದಾಗಿ ಮಸೀದಿ ಸಮಿತಿ ತಿಳಿಸಿದೆ. ಶಾಹಿ ಜಾಮಾ ಮಸೀದಿಯನ್ನು ಸಮೀಕ್ಷೆ ಮಾಡಲು ವಕೀಲ ಆಯುಕ್ತರನ್ನು ನೇಮಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯನ್ನು ಸ್ಥಳೀಯ ನ್ಯಾಯಾಲಯವು ಅನುಮತಿಸಿದೆ. ಅರ್ಜಿ ಸಲ್ಲಿಸಿದ ದಿನವೇ ವಿಚಾರಣೆ ನಡೆಸದೆಯೇ ಅರ್ಜಿಯನ್ನು ಅಂಗೀಕರಿಸಲಾಗಿದೆ ಎಂದು ಮಸೀದಿ ಸಮಿತಿ ತಿಳಿಸಿದೆ

## ನಗರದಲ್ಲಿ ಇಂದು ಸಪ್ತಗಿರಿ ಸಿರಿ

ಸಪ್ತಗಿರಿ ಟ್ರಸ್ಟ್ ಅಡಿಯಲ್ಲಿ ನಡೆಯುತ್ತಿರುವ ಸಪ್ತಗಿರಿ ವಿದ್ಯಾಲಯದ ಸಂಭ್ರಮದ 'ಸಪ್ತಗಿರಿ ಸಿರಿ-2025'ರ ಶಾಲಾ ವಾರ್ಷಿಕೋತ್ಸವ ಸಮಾರಂಭವು ಇಂದು ಬೆಳಿಗ್ಗೆ 10 ರಿಂದ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ನಡಯಲಿದೆ. ಮುಖ್ಯ ಅತಿಥಿಗಳಾಗಿ ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ತ್ಯಾಗೀಶ್ವ ರಾನಂದ ಸ್ವಾಮೀಜಿ, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಪಾಲಿಕೆ ಸದಸ್ಯ ಮಂಜುನಾಥ್ ಗಡಿಗುಡಾಳ್, ಮೇಕಾ ಮುರುಳಿಕೃಷ್ಣ, ಶ್ರೀಮತಿ ಶಿಲ್ಪ, ಬಿ. ಹೆಚ್. ಪರಶುರಾಮಪ್ಪ, ಜಿ. ಕೊಟ್ರೇಶ್, ಆನಂದಪ್ಪ, ಪೃಥ್ವಿ ಶಾಮನೂರು, ಶೈನ್ ಜೆ. ಜೋಸ್, ಶ್ರೀಧರ್, ರಾಮಮೂರ್ತಿ, ರಾಧಿಕಾ ರಾಮಮೂರ್ತಿ, ಎಲ್.ಎನ್. ಅಭಿಲಾಷ್, ಶ್ರೀಮತಿ ಶೈಲಜಾ ರಮೇಶ್, ಆರ್.ವಿ. ಸುಮಂಗಳಾ, ಬಿ.ಎನ್. ತಿಪ್ಪೇಸ್ವಾಮಿ, ಉಪಸ್ಥಿತರಿರುವರು.

## ನಗರದಲ್ಲಿ ಇಂದು ಶಿವಗೋಷ್ಠಿ

ಶ್ರೀ ಶಿವಕುಮಾರಸ್ವಾಮಿ ಮಹಾ ಮಂಟಪ ತರಳಬಾಳು ಬಡಾವಣೆ ಹಾಗೂ ಸಾದರ ನೌಕರರ ಬಳಗ ಇವರ ಸಂಯುಕ್ತಾಶ್ರಯದಲ್ಲಿ ತರಳಬಾಳು ಬಡಾವಣೆಯ ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪ ದಲ್ಲಿ ಶಿವಗೋಷ್ಠಿ-312, ಸ್ಮರಣೆ-89 ಕಾರ್ಯಕ್ರಮವು ಇಂದು ಸಂಜೆ 6.30 ಕ್ಕೆ ನಡೆಯಲಿದೆ.

ಮಾಗನೂರು ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರ ಗೌಡ್ರು ಅಧ್ಯಕ್ಷತೆ ವಹಿಸುವರು. ನಿವೃತ್ತ ಪ್ರಾಚಾರ್ಯ ಕೆ. ಸಿದ್ದನಗೌಡ ಉಜ್ಜಿನಿ ಅವರು 'ಬಸವಣ್ಣ ಮತ್ತು ವಚನ ಸಾಹಿತ್ಯ' ಕುರಿತು ಉಪನ್ಯಾಸ ನೀಡಲಿದ್ದಾರೆ. ನಿವೃತ್ತ ವೈದ್ಯಾಧಿಕಾರಿ ಡಾ. ಎ. ಶಿವನಗೌಡ ಲಿಂಗೈಕ್ಯರ ಸ್ಮರಣೆ ಮಾಡಲಿದ್ದು, ಕದಳಿ ಮಹಿಳಾ ವೇದಿಕೆ ಸದಸ್ಯರಿಂದ ವಚನ ಗಾಯನ ಕಾರ್ಯಕ್ರಮ ನಡೆಯಲಿದೆ.

# ಸಮಾಜದಲ್ಲಿ ಸಂಘ - ಸಂಸ್ಥೆಗಳ ಸೇವೆ ಶ್ಲ್ಯಾಘನೀಯ

## ಹರಪನಹಳ್ಳಿ : ಜೆಸಿಐ ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಲೇಪಾಕ್ಷಪ್ಪ



ಹರಪನಹಳ್ಳಿ, ಜ. 10 - ಸಮಾಜದಲ್ಲಿ ದೀನ-ದಲಿತರು, ಶ್ರಮಿಕರು, ಅಶಕ್ತರು ಇದ್ದು, ಅನೇಕರಿಗೆ ವಿವಿಧ ರೀತಿಯ ಸಹಾಯ ಹಸ್ತ ಬೇಕಾಗಿರುತ್ತದೆ. ಅದಕ್ಕಾಗಿ ಜೆಸಿಐ ನಂತಹ ಸಂಘ-ಸಂಸ್ಥೆಗಳು ಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್. ಲೇಪಾಕ್ಷಪ್ಪ ಹೇಳಿದರು.

ಪಟ್ಟಣ ಸಮೀಪದ ಕಾಯಕದಹಳ್ಳಿ ಮಯೂರಿ ಫಾರ್ಮ್ ಹೌಸ್‌ನಲ್ಲಿ ಜರುಗಿದ 2025ರ ಜೆಸಿಐ ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಅನೇಕ ಸಂದರ್ಭಗಳಲ್ಲಿ ವಿವಿಧ ಸಂಘ-ಸಂಸ್ಥೆಗಳು ಸಮಾಜಕ್ಕೆ ನೆರವು ನೀಡುವುದನ್ನು ನೋಡುತ್ತೇವೆ. ಈ ನಿಟ್ಟಿನಲ್ಲಿ ಸ್ಥಳೀಯ ಜೆಸಿಐ ಸಂಸ್ಥೆಯು ಸಹ ವಿದ್ಯಾರ್ಥಿಗಳು ಯುವಜನರಿಗೆ ತರಬೇತಿಯನ್ನು ಕೊಡುವುದರ ಜೊತೆಗೆ ನಾಯಕರನ್ನೂ ತಯಾರು ಮಾಡಲಿ ಎಂದು ಆಶಯ ವ್ಯಕ್ತಪಡಿಸಿದರು.

ಜೆಸಿಐ ವಲಯಾಧ್ಯಕ್ಷ ಗೌರೀಶ್ ಭಾರ್ಗವ್ ಮಾತನಾಡಿ, ಜೆಸಿಐ ಸಂಸ್ಥೆಯು ಮಾತನಾಡುವ ಕಲೆ, ಸಂಘಟನೆ ವ್ಯವಹಾರಿಕ ಜಾಣ್ಮೆ, ಧೈರ್ಯ ಮುಂತಾದವುಗಳನ್ನು ಕಲಿಸಿಕೊಡುವ ಯುವಜನತೆಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಸಂಸ್ಥೆಯಾಗಿದೆ. ಈ ನಿಟ್ಟಿನಲ್ಲಿ ಹರಪನಹಳ್ಳಿ ಘಟಕವು ತನ್ನ 25 ವರ್ಷಗಳ ಸೇವೆಯಲ್ಲಿ ಜನೋಪಯೋಗಿ ಕೆಲಸವನ್ನೂ ಮಾಡುತ್ತಾ ಬಂದಿದೆ ಎಂದರು.

ಡಾ. ಪ್ರಿಯಾಂಕ ರವಿ ಅಧಿಕಾರ್ ಅವರು ಮಾತನಾಡಿ, ತಮ್ಮ ಅವಧಿಯಲ್ಲಿ ವಿದ್ಯಾರ್ಥಿಗಳು ಯುವಜನರಿಗೆ ತರಬೇತಿ, ರಕ್ತದಾನ ಶಿಬಿರ, ಗಿಡ ನೆಡುವ ಕಾರ್ಯಕ್ರಮ, ಸ್ವಚ್ಛತಾ ಕಾರ್ಯಕ್ರಮಗಳನ್ನು ಹಿರಿಯ ಜೆಸಿಐಗಳ ಸಹಕಾರ ಹಾಗೂ ಪದಾಧಿಕಾರಿಗಳ ಸಹಕಾರದಿಂದ ಮಾಡಲು ಸಾಧ್ಯವಾಯಿತು ಎಂದರು.

ವಲಯ ಉಪಾಧ್ಯಕ್ಷ ಆರ್. ವಿನೀತ್, ಪೂರ್ವ ವಲಯಾಧ್ಯಕ್ಷ ಶಿವಕುಮಾರ್, ಜೇಸಿ ಪರಶುರಾಂ ಚಲವಾದಿ ಮಾತನಾಡಿದರು. ಹರಪನಹಳ್ಳಿ ಜೆಸಿಐ ಸ್ಫೂರ್ತಿ ಘಟಕದ ನೂತನ ಅಧ್ಯಕ್ಷರಾಗಿ ಬಿ.ಸಿ. ವಿಕಾಸ್, ಕಾರ್ಯದರ್ಶಿಯಾಗಿ ಅಮೃತಾ ಪ್ರಶಾಂತ್ ಅಧಿಕಾರ ವಹಿಸಿಕೊಂಡರು.

ಸಮಾರಂಭದಲ್ಲಿ ಪೂರ್ವಾಧ್ಯಕ್ಷ ರವಿಶಂಕರ್, ಕೆ. ಪ್ರಭಾಕರ, ಅಧಿಕಾರ್ ರವೀಂದ್ರ, ಟಿ. ಎಂ.ವೀರೇಶ್, ಕುಬೇಂದ್ರ ನಾಯ್ಕ, ಮಲ್ಲಿಕಾರ್ಜುನ, ಎಂ. ಅಂಬಣ್ಣ, ಹೇಮಣ್ಣ ಮೋರಿಗೇರಿ, ಸಿ. ಪರಶುರಾಂ, ಜೇಸಿಐಗಳಾದ ನಂದಿನಿ ಮಂಜುನಾಥ್, ದಾನೇಶ್ವರಿ ಸಂದೇಶ್, ಸ್ವಪ್ನ ಮಲ್ಲಿಕಾರ್ಜುನ್, ಅಕ್ಷತಾ ರವಿಶಂಕರ್, ಸ್ವರೂಪ ಬಸವರಾಜ್, ಶರತ್ ಚಂದ್ರ, ಚೇತನ್ ಎನ್.ಕೆ.ಸಂತೋಷ್, ವೀರನಗೌಡ್ರು, ಶಂಬುಲಿಂಗನಗೌಡ್, ಅಮೃತ ಮಂಜುನಾಥ್ ಮುಂತಾದವರು ಭಾಗವಹಿಸಿದ್ದರು.

## ಪಲ್ಲಾಗಟ್ಟೆಯಲ್ಲಿ ನಾಳೆ ಅಯ್ಯಪ್ಪ ಸ್ವಾಮಿ ಪಡಿಪೂಜೆ, ಅನ್ನ ಸಂತರ್ಪಣೆ



ಜಗಳೂರು, ಜ. 10- ತಾಲ್ಲೂಕಿನ ಪಲ್ಲಾಗಟ್ಟೆಯ ಅಯ್ಯಪ್ಪಸ್ವಾಮಿ ಸೇವಾ ಸಮಿತಿ ವತಿಯಿಂದ 25ನೇ ವರ್ಷದ ಶಬರಿಮಲೈ ಯಾತ್ರೆ ಪ್ರಯುಕ್ತ ಅಯ್ಯಪ್ಪ ಸ್ವಾಮಿ ಪಡಿ ಪೂಜೆ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 12ರ ಭಾನುವಾರ ಸಂಜೆ 6 ಗಂಟೆಗೆ ಗ್ರಾಮದ ಎಲ್‌ಐಸಿ ರಂಗಮಂದಿರದಲ್ಲಿ ನಡೆಸಲಾಗುವುದು ಎಂದು ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ ತಿಳಿಸಿದೆ.

ಅಂದು ಸಂಜೆ 4 ಗಂಟೆಗೆ ಅಯ್ಯಪ್ಪಸ್ವಾಮಿ ಮೂರ್ತಿಯ ಅದ್ಧೂರಿ ಮೆರವಣಿಗೆಯನ್ನು ನಡೆಸಲಾಗುವುದು. ಸಂಜೆ 6 ಗಂಟೆಗೆ ವಿಶೇಷ ಹೂವಿನ ಅಲಂಕಾರದೊಂದಿಗೆ ಪಡಿಪೂಜೆ ನಂತರ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಯಲಿದೆ. ಪೂಜೆಯ ನಂತರ ಹರಪನಹಳ್ಳಿ ತಾಲ್ಲೂಕು ಹೊಸಕೋಟೆ ಗ್ರಾಮದ ಕಲ್ಲೇಶ್ವರ ಭಜನ ಮಂಡಳಿ ವತಿಯಿಂದ ಭಜನೆ ಕಾರ್ಯಕ್ರಮ ಆಯೋಜಿಸಲಾಗಿದೆ.

ದಿನಾಂಕ 13ರ ಸೋಮವಾರ ಸಂಜೆ 6 ಗಂಟೆಗೆ ಶಬರಿಮಲೈ ಯಾತ್ರೆ ಪ್ರಾರಂಭವಾಗಲಿದೆ. ಕಳೆದ 25 ವರ್ಷಗಳ ಹಿಂದೆ 2000ನೇ ಇಸವಿಯಿಂದ ಪ್ರಾರಂಭವಾದ ಶಬರಿ ಮಲೈ ಯಾತ್ರೆ ಯಶಸ್ವೀ 24 ವರ್ಷ ಪೂರೈಸಿ 25ನೇ ವರ್ಷಕ್ಕೆ ಪಾದಾರ್ಪಣೆ ಮಾಡಲು ಪಲ್ಲಾಗಟ್ಟೆ ಗ್ರಾಮಸ್ಥರು, ಅಕ್ಕಪಕ್ಕದ ಗ್ರಾಮಸ್ಥರು ಸಹಕರಿಸಿದ್ದಾರೆ.

## ನಗರದಲ್ಲಿ ಇಂದಿನಿಂದ ಶ್ರೀ ಬನಶಂಕರಿ ದೇವಿಯ ಜಾತ್ರಾ ಮಹೋತ್ಸವ



ಡಿಸಿಎಂ ಲೇಔಟ್ ಹಿಂಭಾಗದ ರಾಜೇಂದ್ರ ಬಡಾವಣೆಯಲ್ಲಿರುವ ಶ್ರೀ ಬನಶಂಕರಿ ದೇವಿಯ ದೇವಸ್ಥಾನದಲ್ಲಿ ಬನದ ಹುಣ್ಣಿಮೆ ಪ್ರಯುಕ್ತ 11ನೇ ವರ್ಷದ ಜಾತ್ರಾ ಮಹೋತ್ಸವವನ್ನು ಇಂದಿನಿಂದ ಮೂರು ದಿನ ಹಮ್ಮಿಕೊಳ್ಳಲಾಗಿದೆ.

ಹಂಪಿಯ ಹೇಮಕೂಟ ಗಾಯತ್ರಿ ಪೀಠದ ದೇವಾಂಗ ಜಗದ್ಗುರು ದಯಾನಂದ ಪುರಿ ಶ್ರೀಗಳ ಕೃಪಾ ಆಶೀರ್ವಾದದೊಂದಿಗೆ ಈ ಜಾತ್ರಾ ಮಹೋತ್ಸವ ಜರುಗಲಿದ್ದು, ಇಂದು ಬೆಳಗ್ಗೆ 8.30ಕ್ಕೆ ನಂದಿ ಧ್ವಜಾರೋಹಣ, ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಿದೆ. ನಾಳೆ ಭಾನುವಾರ ಬೆಳಗ್ಗೆ 7.30ಕ್ಕೆ ಗಂಗಾ ಪೂಜೆ, ಬೆಳಗ್ಗೆ 10.30ಕ್ಕೆ ಶ್ರೀ ಶಾಖಾಂಬರಿ ವ್ರತ, ವಿಶೇಷ ತರಕಾರಿ ಅಲಂಕಾರ ನೆರವೇರಲಿದೆ.

ದಿನಾಂಕ 13 ರ ಸೋಮವಾರ ಬೆಳಗ್ಗೆ 6 ಗಂಟೆಗೆ ಪಂಚಾಮೃತ ಅಭಿಷೇಕ, ಬೆಳಿಗ್ಗೆ 10.30 ರಿಂದ 11.30 ರವರೆಗೆ ವಿಶೇಷ ಅಲಂಕಾರ, ಮಹಾಮಂಗಳಾರತಿ ನೆರವೇರಲಿದೆ. ನಂತರ ಮಧ್ಯಾಹ್ನ 12 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದ್ದು, ಮಧ್ಯಾಹ್ನ 3.30ಕ್ಕೆ ಶ್ರೀ ಬನಶಂಕರಿ ದೇವಿಯ ಮೆರವಣಿಗೆ ನಿಟ್ಟುವಳ್ಳಿಯ ರಾಜ ಬೀದಿಗಳಲ್ಲಿ ಸಾಗಲಿದೆ.

## ನಗರದಲ್ಲಿ ನಾಳೆ ಅಹಲ್ಯಾಬಾಯಿ ಹೋಳ್ಕರ್ ಜನ್ಮ ದಿನಾಚರಣೆ



ದಾವಣಗೆರೆ, ಜ. 10 - ತಾಲ್ಲೂಕು, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಅಹಲ್ಯಾಬಾಯಿ ಹೋಳ್ಕರ್ ಅವರ ತ್ರಿಶತಾಬ್ದಿ ಜನ್ಮ ದಿನಾಚರಣೆಯು ನಾಡಿದ್ದು ದಿನಾಂಕ 12ರ ಭಾನುವಾರ ಸಂಜೆ 4 ಗಂಟೆಗೆ ನಗರದ ಶ್ರೀ ಸದ್ಯೋಜ್ಯಾತ ಸ್ವಾಮೀಜಿ ಹಿರೇಮಠದಲ್ಲಿ ನಡೆಯಲಿದೆ. ಕಾರ್ಯಕ್ರದ ಅಧ್ಯಕ್ಷತೆಯನ್ನು ಜನಶಿಕ್ಷಣ ಸಂಸ್ಥಾನ ಛೇರ್ಮನ್ ಶ್ರೀಮತಿ ಜಯಲಕ್ಷ್ಮಿ ಎಸ್. ಮೆಹರ್ವಾಡೆ ಹಾಗೂ ಕರ್ನಾಟಕ ದಕ್ಷಿಣ ಪ್ರಾಂತ ಸಹ ಸಂಯೋಜಕ ಬೌದ್ದಿಕ್ ಗು. ರುದ್ರಯ್ಯ ಉಪಸ್ಥಿತರಿರುವರು.

## ರಾಜ್ಯ ಮಟ್ಟದ ಕ್ವಿಜ್ : ಸಿದ್ಧಗಂಗಾ ಪಿಯು ವಿದ್ಯಾರ್ಥಿಗಳು ಪ್ರಥಮ





ದಾವಣಗೆರೆ, ಜ. 10- ತುಮಕೂರಿನ ಎಂಪ್ರೆಸ್ ಸರ್ಕಾರಿ ಬಾಲಕರ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ರಸ ಪ್ರಶ್ನೆ ವಿಭಾಗದಲ್ಲಿ ನಗರದ ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಾದ ಅಜಯ್ ಕುಮಾರ್ ಆರ್. ಮತ್ತು ರವಿಕುಮಾರ್ ಎನ್. ಪ್ರಥಮ ಸ್ಥಾನಗಳಿಸಿ ಕಾಲೇಜಿಗೆ ಮತ್ತು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಈ ಬಾಲಕರು ಪ್ರಶಸ್ತಿ ಪತ್ರದ ಜೊತೆಗೆ ತಲಾ 12 ಸಾವಿರ ನಗದು ಬಹುಮಾನ ಪಡೆದಿದ್ದಾರೆ. ಬಾಲಕರ ಅಪ್ರತಿಮ ಸಾಧನೆಯನ್ನು ಕಾಲೇಜಿನ ಪ್ರಾಚಾರ್ಯರಾದ ವಾಣಿಶ್ರೀ, ಸಂಸ್ಥೆಯ ವ್ಯವಸ್ಥಾಪಕ ಡಾ|| ಜಯಂತ್ ಹೇಮಂತ್, ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೌಜಾ ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಮಧುರ ಗೀತೆಗಳ ಸಂಗಮ, ಕ್ಯಾಂಪ್ ಫೈಯರ್

ಭಾರತೀಯ ಗ್ರಾಮೀಣ ಮಹಿಳಾ ಸಂಘ, ವನಿತಾ ಸಮಾಜದ ವತಿಯಿಂದ ನೂತನ ವರ್ಷಕ್ಕೆ ಸಂಗೀತ ಸಂಜೆ ಮಧುರ ಗೀತೆಗಳ ಸಂಗಮ ಮತ್ತು ಕ್ಯಾಂಪ್ ಫೈಯರ್ ಕಾರ್ಯಕ್ರಮವು ಇಂದು ಸಂಜೆ 6 ಗಂಟೆಗೆ ವನಿತಾ ಸಮಾಜದ ಸತ್ಯ ಸಾಯಿ ರಂಗಮಂದಿರದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಎಸ್ಪಿ ಶ್ರೀಮತಿ ಉಮಾ ಪ್ರಶಾಂತ್, ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ವನಿತಾ ಸಮಾಜದ ಅಧ್ಯಕ್ಷರಾದ ಪದ್ಮ ಪ್ರಕಾಶ್ ಉಪಸ್ಥಿತರಿರುವರು. ಭಾರತೀಯ ಗ್ರಾಮೀಣ ಮಹಿಳಾ ಸಂಘದ ಶ್ರೀಮತಿ ಗುಂಡಿ ಪುಷ್ಪ ಸಿದ್ದೇಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ನಗರದ ಗಾನಕೋಗಿಲೆಗಳಾದ ಶ್ರೀಮತಿ ನೇತ್ರಾ, ಕು. ಕೃತಿಕಾ ರಾಣಿ, ಚಿರಂತ್ ಅವರು ಸುಮಧುರ ಗೀತೆಗಳ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಗೀತಾ ಬದ್ರಿನಾಥ್ ತಿಳಿಸಿದ್ದಾರೆ.

## ಜಿಗಳಿಯಲ್ಲಿ ಇಂದು ಭಕ್ತರ ಸಭೆ



ಮಲೇಬೆನ್ನೂರು ಸಮೀಪದ ಜಿಗಳಿ ಗ್ರಾಮದ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಗ್ರಾಮಸ್ಥರ ಹಾಗೂ ರಂಗನಾಥ ಸ್ವಾಮಿಯ ಸದ್ಭಕ್ತರ ಸಭೆಯನ್ನು ಕರೆಯಲಾಗಿದೆ.

ಪುರಾತನ ಕಾಲದ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನ ಶಿಥಿಲಗೊಂಡಿರುವ ಕಾರಣ ದೇವ ಸ್ಥಾನವನ್ನು ಹೊಸದಾಗಿ ನಿರ್ಮಿಸುವ ಬಗ್ಗೆ ಚರ್ಚಿಸಲು ಈ ಸಭೆ ಕರೆಯಲಾಗಿದೆ ಎಂದು ಗ್ರಾಮದ ಗೌಡ್ರ ಬಸವರಾಜಪ್ಪ ತಿಳಿಸಿದ್ದಾರೆ.

## ಇಂದು ಶಿವಗಂಗೋತ್ರಿ ಉತ್ಸವ

ಶ್ರೀ ಕೇದಾರೇಶ್ವರ ಎಜುಕೇಷನ್ ಟ್ರಸ್ಟ್‌ನ ಶಿವಗಂಗೋತ್ರಿ ಪಬ್ಲಿಕ್ ಸ್ಕೂಲ್‌ನಲ್ಲಿ 14ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ - ಶಿವಗಂಗೋತ್ರಿ ಉತ್ಸವವು ಇಂದು ಸಂಜೆ 4 ಗಂಟೆಗೆ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ಆರ್‌ಪಿ ಸಮೂಹ ಸಂಸ್ಥೆ ಸಂಸ್ಥಾಪಕ ತ್ಯಾವಣಿಗಿ ವೀರಭದ್ರಸ್ವಾಮಿ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂತೇಬೆನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಎನ್. ಮಲ್ಲಯ್ಯ, ನಿವೃತ್ತ ಮುಖ್ಯೋಪಾಧ್ಯಾಯ ಎಂ.ಆರ್. ಲಕ್ಷ್ಮಣ, ನಿವೃತ್ತ ಪಿಡಿಓ ಎಂ.ಎಸ್. ವಿರುಪಾಕ್ಷಯ್ಯ, ಎಸಿಎಂ ಸ್ಕೂಲ್‌ನ ಸಂಸ್ಥಾಪಕ ಕಾರ್ಯದರ್ಶಿ ಎಸ್. ಎಂ. ಮಂಜುನಾಥ ಸ್ವಾಮಿ ಆಗಮಿಸಲಿದ್ದಾರೆ.

## ಜಗಳೂರಿಗೆ ಇಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿಳಿಮಲೆ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅವರು ಇಂದು ಬೆಳಿಗ್ಗೆ 10 ರಿಂದ ಜಗಳೂರಿನ ಬಯಲು ರಂಗಮಂದಿರದಲ್ಲಿ ನಡೆಯುವ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು.

## ಹಳೇಬಾತಿಯಲ್ಲಿ ಸಾಮಾಜಿಕ ಪರಿಶೋಧನೆಯ ಶಾಲಾ ಪೋಷಕರ ಸಭೆ



ದಾವಣಗೆರೆ, ಜ.10- ತಾಲ್ಲೂಕಿನ ಹಳೇ ಬಾತಿಯಲ್ಲಿನ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಮಗ್ರ ಶಿಕ್ಷಣ ಯೋಜನೆಯ ಸಾಮಾಜಿಕ ಪರಿಶೋಧನೆಯ ಶಾಲಾ ಪೋಷಕರ ಸಭೆ ನಡೆಯಿತು.

ಈ ವೇಳೆ ಪಂ.ರಾ ಸಹಾಯಕ ನಿರ್ದೇಶಕ ವಿ.ಸಿ ಅಭಿಜಿತ್, ಹೆಚ್.ಪಿ. ವಾಣಿ, ಮುಖ್ಯಶಿಕ್ಷಕಿ ಎ.ಟಿ. ಪ್ರೇಮ ಕುಮಾರಿ, ಎಸ್.ಡಿ.ಎಂ.ಸಿ ಅಧ್ಯಕ್ಷ ಎ.ಬಿ. ಜಗದೀಶಪ್ಪ, ಉಪಾಧ್ಯಕ್ಷೆ ಎಸ್.ಎನ್. ರೂಪಾ, ಕೆ.ಸಿ ಮಮತಾ, ಐಶ್ವರ್ಯಾ ಹಾಗೂ ಶಾಲಾ ಸಿಬ್ಬಂದಿ ಇದ್ದರು.

## ಮಾಯಕೊಂಡದ ಲಕ್ಷ್ಮಿವೆಂಕಟೇಶ್ವರ ಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ಪೂಜೆ



ಮಾಯಕೊಂಡ, ಜ. 10 - ಸಮೀಪದ ಅಣಜಿ ಗೊಲ್ಲರಹಳ್ಳಿಯಲ್ಲಿ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿಯನ್ನು ಭಕ್ತಿ ಭಾವದಿಂದ ಆಚರಿಸಲಾಯಿತು.

ಶುಕ್ರವಾರ ರಾತ್ರಿ ಅಖಂಡ ಭಜನೆ ಏರ್ಪಡಿಸಲಾಗಿತ್ತು. ಶನಿವಾರ ಬೆಳಗಿನ ಜಾವ ವಿಶೇಷ ಪೂಜೆ, ಕೈಂಕರ್ಯಗಳು ಆರಂಭಗೊಂಡವು. ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಪೂಜೆಗಳು ಜರುಗಿದವು. ವಿಷ್ಣು ಸಹಸ್ರನಾಮ ಪಠಿಸಲಾಯಿತು. ಭಕ್ತರು ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿ, ಪುಷ್ಪಾಲಂಕೃತ ವೈಕುಂಠ ಬಾಗಿಲನ್ನು ಪ್ರವೇಶಿಸಿ ಭಕ್ತಿ ಭಾವ ಮೆರೆದರು. ಅಣಜಿ ಗೊಲ್ಲರಹಳ್ಳಿ, ಅಣಜಿ, ಮೆಳ್ಳೇಕಟ್ಟೆ, ಮೂಡೇನಹಳ್ಳಿ, ಗಿರಿಯಾಪುರ, ಜಮ್ಮಾಪುರ, ಕಂದನ ಕೋವಿ, ಕೆರೆಯಾಗಳಹಳ್ಳಿ, ಉಚ್ಚಂಗಿದುರ್ಗ, ಕಂಬತ್ತಹಳ್ಳಿ ಸೇರಿದಂತೆ ಹಲವು ಗ್ರಾಮಗಳ ನೂರಾರು ಭಕ್ತರು ವೈಕುಂಠ ದ್ವಾರದ ಪ್ರವೇಶದಲ್ಲಿ ಸರದಿ ನಿಂತಿದ್ದರು.

ಭಕ್ತರಿಗೆ ಪಂಚಾಮೃತ ಮತ್ತು ಲಡ್ಡು ಪ್ರಸಾದ ವಿತರಿಸಲಾಯಿತು. ಪದ್ಮಾವತಿ ಮತ್ತು ಶ್ರೀಶೈಲ ತಂಡಗಳಿಂದ ನಿರಂತರ ಭಜನೆ ನಡೆಯಿತು. ಧರ್ಮದರ್ಶಿ ಬಿ.ಟಿ. ಸಿದ್ದಪ್ಪ, ಕೆಇಬಿ ಹನುಮಂತಪ್ಪ, ವೆಂಕಟೇಶಪ್ಪ, ಕೃಷ್ಣಪ್ಪ, ಜಿ.ಎಚ್. ಕೃಷ್ಣಪ್ಪ, ವೆಂಕಟರಮಣಪ್ಪ, ತಿಮ್ಮಪ್ಪ ಮತ್ತಿತರರು ನೇತೃತ್ವ ವಹಿಸಿದ್ದರು.

## ಹಿರೇಮಠದ ಹೆಚ್.ಎಸ್. ಪವಿತ್ರಾನಂದ ಸ್ವಾಮಿ ನಿಧನ



ದಾವಣಗೆರೆ ಹಳೆಪೇಟೆ ಹಿರೇಮಠದ ವಾಸಿ

**ಹೆಚ್.ಎಸ್. ಪವಿತ್ರಾನಂದ ಸ್ವಾಮಿ**

ಇವರು ದಿನಾಂಕ 10.01.2025ರ ಶುಕ್ರವಾರ ಬೆಳಗಿನ ಜಾವ 4 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 70 ವರ್ಷ ವಯಸ್ಸಾಗಿತ್ತು.
ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಗ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.01.2025ರ ಶುಕ್ರವಾರ ಸಂಜೆ 5 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬದವರು :**
**ಮೊ. 97431 53991, 80955 95319, 98862 42527**

## ಅಲ್-ಕೈದಾ ಉಗ್ರ ಸಂಘಟನೆಯ ಶಂಕಿತ ಸದಸ್ಯನ ಬಂಧನ

ರಾಂಚಿ, ಜ.10- ಭಾರತ ಉಪ ಖಂಡದಲ್ಲಿನ ಅಲ್-ಕೈದಾ ಉಗ್ರ ಸಂಘಟನೆಯ ಶಂಕಿತ ಸದಸ್ಯನನ್ನು ದೆಹಲಿ ಪೊಲೀಸ್ ವಿಶೇಷ ಪಡೆಯು ರಾಂಚಿಯಲ್ಲಿ ಶುಕ್ರವಾರ ಬಂಧಿಸಿದೆ. ಬಂಧಿತನನ್ನು ಶಹಬಾಜ್ ಎಂದು ಗುರುತಿಸಲಾಗಿದೆ. ಭಯೋತ್ಪಾದನೆ ನಿಗ್ರಹ ದಳದ (ಎಟಿಎಸ್) ಸಹಕಾರದೊಂದಿಗೆ ದೆಹಲಿ ಪೊಲೀಸರು ಈತನನ್ನು ಬಂಧಿಸಿದ್ದಾರೆ ಎಂದು ಎಂದು ಎಎನ್‌ಐ ವರದಿ ಮಾಡಿದೆ. ಇತನ ಸಹಚರರು ಎನ್ನಲಾದ ಹಲವರನ್ನು ಪೊಲೀಸರು ಈಗಾಗಲೇ ಬಂದಿಸಿದ್ದಾರೆ. ಆದರೆ, ಶಹಬಾಜ್ ಹಲವು ದಿನಗಳಿಂದ ತಲೆಮರೆಸಿಕೊಂಡಿದ್ದ ಎನ್ನಲಾಗಿದೆ.

## ಚಿರಸ್ಮರಣೆ



ಶ್ರೀಮತಿ ಕಲ್ಲಮ್ಮನವರು
ನಿಧನ: 11-01-1994

ತಾವು ನಮ್ಮನ್ನಗಲಿ ಇಂದಿಗೆ 31 ವರ್ಷಗಳಾದವು. ತಾವು ಹಾಕಿ ಕೊಟ್ಟ ಸನ್ಮಾರ್ಗ, ಸನ್ನಡತೆ ಹಾಗೂ ಸದಾ ತಮ್ಮ ನೆನಪಿನಲ್ಲಿರುವ:

**ತಮ್ಮ ಪತಿ, ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.**

## ಹರಿಹರದ ಎಂ.ಆರ್.ಬಿ ಪ್ರೌಢಶಾಲೆಯಲ್ಲಿ ಇಂದು ಗುರುವಂದನೆ

ಎಂ.ಆರ್.ಬಿ. ಪ್ರೌಢಶಾಲೆಯ 1992-93 ನೇ ಸಾಲಿನ ವಿದ್ಯಾರ್ಥಿಗಳಿಂದ ಇಂದು ಬೆಳಿಗ್ಗೆ 9 ಗಂಟೆಗೆ ಗುರುವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಉಜ್ಜಯಿನಿ ಜಗದ್ಗುರು ಸಿದ್ಧಲಿಂಗ ರಾಜದೇಶೀ ಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಜಗದ್ಗುರು ಡಾ. ಚೆನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಸಾನ್ನಿಧ್ಯ ವಹಿಸಲಿದ್ದಾರೆ.

ಅಧ್ಯಕ್ಷತೆಯನ್ನು ಎ.ಜೆ.ವಿ.ಪಿ. ವಿದ್ಯಾಪೀಠದ ಉಪಾಧ್ಯಕ್ಷ ಡಿ.ಎಂ. ಹಾಲಸ್ವಾಮಿ ವಹಿಸಲಿದ್ದಾರೆ.

ಎಸ್.ಜೆ.ವಿ.ಪಿ. ವಿದ್ಯಾಪೀಠದ ಕಾರ್ಯದರ್ಶಿ ಆರ್.ಟಿ. ಪ್ರಶಾಂತ್ ಗುರುವಂದನೆ ಸಲ್ಲಿಸುವರು. ಶಿಕ್ಷಕರಾದ ಜೆ.ಎಸ್. ಹಿರೇಮಠ, ಎನ್.ಎ. ಹಿರೇಮಠ, ಎನ್ ಗಂಗಾಧರ್, ಪಿ.ಕೆ. ಅನಸೂಯ, ಹೆಚ್. ಕೊಟ್ರೇಶಪ್ಪ, ಎಸ್. ಕೃಷ್ಣಮೂರ್ತಿ, ಟಿ.ಕೆ. ಪ್ರಭುಸ್ವಾಮಿ, ಎಸ್.ಬಿ. ಹಿರೇಮಠ, ಎನ್.ಎಂ. ಕೆ. ರಾಜು ಇತರರು ಮಾತನಾಡಲಿದ್ದಾರೆ.

## ನಗರದಲ್ಲಿ ಇಂದು ಜಿಲ್ಲಾ ಸರ್ಕಾರಿ ನೌಕರರ ಸಂಘದ ಕಾರ್ಯಕಾರಿಣಿ ಸಭೆ, ಪದಗ್ರಹಣ

ದಾವಣಗೆರೆ, ಜ.10- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ 2024-29ನೇ ಸಾಲಿನ ಪ್ರಥಮ ರಾಜ್ಯ ಮಟ್ಟದ ಕಾರ್ಯಕಾರಿಣಿ ಸಭೆ, ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಬೀಳ್ಕೊಡುಗೆ ಸಮಾರಂಭವು ನಾಳೆ ದಿನಾಂಕ 11ರ ಶನಿವಾರ ನಡೆಯಲಿದೆ ಎಂದು ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಬಿ.ಪಾಲಾಕ್ಷಿ ತಿಳಿಸಿದರು.


ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿರಮಗೊಂಡನಹಳ್ಳಿ ಬಳಿಯ ಸುಧಾ ವೀರೇಂದ್ರ ಪಾಟೀಲ್ ಸಮುದಾಯ ಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ಕಾರ್ಯಕಾರಿಣಿ ಸಭೆಯು ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ರಾಜ್ಯದ 28 ಜಿಲ್ಲೆ ಹಾಗೂ 3 ಶೈಕ್ಷಣಿಕ ಜಿಲ್ಲೆಗಳಿಂದ ಜಿಲ್ಲಾಧ್ಯಕ್ಷರು, ಸಂಘದ ರಾಜ್ಯ ಪರಿಷತ್ ಸದಸ್ಯರು, ತಾಲ್ಲೂಕು ಅಧ್ಯಕ್ಷರುಗಳು ಸೇರಿದಂತೆ 1500ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಲಿದ್ದಾರೆ. ಅಂದು ಬೆಳಿಗ್ಗೆ 10 ಗಂಟೆಗೆ ಹದಡಿ ರಸ್ತೆ ಅಂಡರ್ ಪಾಸ್‌ನಿಂದ ಸಮುದಾಯ ಭವನದ ವರೆಗೆ ಸರ್ಕಾರಿ ನೌಕರರಿಂದ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ನಂತರ ಮಧ್ಯಾಹ್ನ 3 ಗಂಟೆಗೆ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧ್ಯಕ್ಷ ವೀರೇಶ್ ಎಸ್.ಒಡೇನಪುರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಜಿಲ್ಲಾ ಖಜಾಂಚಿ ತಿಪ್ಪೇಸ್ವಾಮಿ ಬಿ.ಆರ್., ಕಾರ್ಯಾಧ್ಯಕ್ಷ ಸಿ. ಪರಶುರಾಮಪ್ಪ, ರಾಜ್ಯ ಪರಿಷತ್ ಸದಸ್ಯ ಜಿ. ಓಬಳಪ್ಪ, ಮಂಜುನಾಥ ಹಿತ್ತಲಮನಿ, ಅಂಜಿನಪ್ಪ ಇದ್ದರು.

## ಹರಿಹರದಲ್ಲಿ ಇಂದು ಶ್ರೀ ಅಯ್ಯಪ್ಪ ಸ್ವಾಮಿ ಸುವರ್ಣ ಮಹೋತ್ಸವ



ಗಾಂಧಿ ಮೈದಾನದಲ್ಲಿ ಇಂದು ಶ್ರೀ ಅಯ್ಯಪ್ಪ ಸ್ವಾಮಿ 50ನೇ ವರ್ಷದ ಸುವರ್ಣ ಮಹೋತ್ಸವ ಹಾಗೂ ಮಹಾ ದೀಪೋತ್ಸವ ಕಾರ್ಯಕ್ರಮ ಆಚರಿಸಲಾಗುವುದೆಂದು ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ ಸಮಿತಿ ಮುಖಂಡರಾದ ದುರುಗೋಜಿ ಮೋಹನ್ ಮತ್ತು ಚಿಂಚೊಳ್ಳಿ ಮಂಜುನಾಥ್ ತಿಳಿಸಿದರು.

ಬ್ರಹ್ಮ ಶ್ರೀ ವಿ.ಎನ್. ವಾಸುದೇವನ್ ನಂಬೋದು ಅವರ ಮಾರ್ಗದರ್ಶನದಲ್ಲಿ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನೆರವೇರಲಿವೆ. ಸಂಜೆ 4 ಗಂಟೆಗೆ ಮಹಾ ದೀಪೋತ್ಸವ ಮೆರವಣಿಗೆ ನಡೆಯಲಿದೆ.

ಸಂಜೆ 6ರಿಂದ ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ವಿಶೇಷ ಆಹ್ವಾನಿತರಾಗಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರಾದ ಬಿ.ಪಿ. ಹರೀಶ್, ಪ್ರಕಾಶ್ ಕೋಳಿವಾಡ, ಮಾಜಿ ಶಾಸಕರಾದ ಹೆಚ್ ಎಸ್. ಶಿವಶಂಕರ್, ಎಸ್.ರಾಮಪ್ಪ, ಅರುಣ್ ಕುಮಾರ್ ಪೂಜಾರ್, ನಗರಸಭೆ ಅಧ್ಯಕ್ಷೆ ಕವಿತಾ ಬೇಡರ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ವಾಗೀಶ್ ಸ್ವಾಮಿ, ಗ್ರಾಪಂ ಅಧ್ಯಕ್ಷೆ ಗೀತಾ ಮಂಜುನಾಥ್, ಗ್ರಾಸಿಂನ ಸೌಮ್ಯ ಮೊಹಂತಿ, ಜ್ಯೋತಿ ಪ್ರಕಾಶ್ ಇತರರು ಭಾಗವಹಿಸಲಿದ್ದಾರೆ.

ರಾತ್ರಿ 8 ರಿಂದ ರಂಗುರಂಗಿನ ಸಿಡಿಮದ್ದು ಬಾಣ ಬಿರುಸಿನ ಪಟಾಕಿ ಪ್ರದರ್ಶನ ನಡೆಯಲಿದೆ. ನಾಳೆ ಭಾನುವಾರ ಬೆಳಗ್ಗೆ 11-30 ಕ್ಕೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿದೆ.


ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ದರ್ಶನಕ್ಕಾಗಿ ಹರಿದು ಬಂದ ಭಕ್ತ ಸಾಗರ.


ಉತ್ತರ ದ್ವಾರದ ಮೂಲಕ ಆಗಮಿಸುತ್ತಿರುವ ಭಕ್ತರು


ದೇವಸ್ಥಾನದ ಮುಂಭಾಗ ಪ್ರಸಾದ ವಿತರಿಸಲಾಯಿತು.

# ದೇವನಗರಿಯಲ್ಲಿ ವೈಭವದ ವೈಕುಂಠ ಏಕಾದಶಿ

## ಲಕ್ಷ್ಮೀ ವೆಂಕಟೇಶನ ದರ್ಶನಕ್ಕೆ ಹರಿದು ಬಂದ ಭಕ್ತ ಸಾಗರ, ಉತ್ತರ ದ್ವಾರದ ಮೂಲಕ ದರ್ಶನ

ದಾವಣಗೆರೆ, ಜ.8- ದೇವನಗರಿಯಲ್ಲಿ ಶನಿವಾರ ವೈಕುಂಠ ಏಕಾದಶಿಯ ಸಂಭ್ರಮ ಮನೆ ಮಾಡಿತ್ತು. ನಗರ ಸೇರಿದಂತೆ ಜಿಲ್ಲೆಯಾದ್ಯಂತ ಶ್ರದ್ಧೆ ಹಾಗೂ ಭಕ್ತಿಯಿಂದ ವೈಕುಂಠ ಏಕಾದಶಿ ಆಚರಿಸಿದರು.

ಎಂಸಿಸಿ 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬೆಳಿಗ್ಗೆ 6 ರಿಂದ ರಾತ್ರಿ 10 ಗಂಟೆಯವರೆಗೆ ಶ್ರೀ ಸ್ವಾಮಿಯ ಅಖಂಡ ದರ್ಶನಕ್ಕೆ ಅನುವು ಮಾಡಿಕೊಡಲಾಗಿತ್ತು.

ವೆಂಕಟೇಶ್ವರ ಸ್ವಾಮಿ-ಪದ್ಮಾವತಿ ದೇವಿಯನ್ನು ಹೂವಿನಿಂದ ಅಲಂಕೃತಗೊಳಿಸಲಾಗಿತ್ತು. ದೇಗುಲಗಳಿಗೆ ವಿದ್ಯುತ್ ಅಲಂಕಾರ ಮಾಡಲಾಗಿತ್ತು. ನಸುಕಿನಿಂದಲೇ ಪಂಚಾಮೃತ ಅಭಿಷೇಕ, ಅಷ್ಟೋತ್ತರ, ಮಂಗಳ ಸ್ನಾನ, ತುಳಸಿ ಅರ್ಚನೆ, ಮಹಾ ಮಹಾಮಂಗಳಾರತಿ ನಡೆಯಿತು.

ವೈಕುಂಠ ಏಕಾದಶಿಯಂದು ಉತ್ತರ ದ್ವಾರದ ಮೂಲಕ ವೆಂಕಟೇಶ್ವರ ಸ್ವಾಮಿಯ ದರ್ಶನ ಮಾಡಿದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಇದೆ. ಹಾಗಾಗಿಯೇ ಎಲ್ಲಾ ದೇವಸ್ಥಾನಗಳಲ್ಲಿ ಉತ್ತರ ದ್ವಾರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಬೆಳಗಿನ ಚಳಿಯನ್ನು ಲೆಕ್ಕಿಸದೆ ಭಕ್ತರು ವೆಂಕಟೇಶ್ವರನ ದರ್ಶನಕ್ಕಾಗಿ ಸರದಿಗೆ ನಿಂತಿದ್ದರು. ವೈಕುಂಠ ದ್ವಾರದ ಮೂಲಕ ಸಾಗಿ ದೇವರ ದರ್ಶನ ಪಡೆದು ಭಕ್ತರು ಪುನೀತರಾದರು. ದೇವಸ್ಥಾನದ ಮುಂಭಾಗ ಲಡ್ಡು ಪ್ರಸಾದ ವಿತರಿಸಲಾಯಿತು. ಸಾಮಾನ್ಯ ದರ್ಶನ ಹಾಗೂ ಹಣ ಪಾವತಿಸಿ ಹೋಗುವ ವಿಶೇಷ ದರ್ಶನಕ್ಕೆ ಎರಡು ರೀತಿಯ ಸರದಿ ವ್ಯವಸ್ಥೆ ಇತ್ತು. ಮುನ್ನೆಚ್ಚರಿಕಾ ಕ್ರಮವಾಗಿ ಗದ್ದಲ ಉಂಟಾಗದಂತೆ ದೇವಸ್ಥಾನಗಳಲ್ಲಿ ಬ್ಯಾರಿಕೇಡ್ ಅಳವಡಿಸಿ, ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿತ್ತು.

ದೇವಸ್ಥಾನದ ಮುಂಭಾಗ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಿಂದ ಪರಮಾತ್ಮನ ಕುರಿತ ಮಾಹಿತಿ ತಿಳಿಸಿಕೊಡಲಾಗುತ್ತಿತ್ತು.

ನಗರದ ಬೇತೂರು ರಸ್ತೆಯ ಲಕ್ಷ್ಮಿ ವೆಂಕಟೇಶ್ವರ ದೇವಾಲಯದಲ್ಲೂ ವೈಕುಂಠ ಏಕಾದಶಿ ಮಹೋತ್ಸವವನ್ನು ವೈಭವದಿಂದ ಆಚರಿಸಲಾಯಿತು. ಇಲ್ಲಿ ಮುಂಜಾನೆ 5.30ರಿಂದಲೇ ಭಕ್ತರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ರಾತ್ರಿ 11.30 ರವರೆಗೂ ಇಲ್ಲಿ ಭಕ್ತರು ದರ್ಶನ ಪಡೆದರು. ಇಲ್ಲೂ ಕೂಡ ಭಕ್ತರ ದಂಡೇ ನೆರೆದಿತ್ತು, ತೀರ್ಥ, ಪ್ರಸಾದ ವಿತರಿಸಲಾಯಿತು.

ಅಣಜಿ ಗೊಲ್ಲರಹಳ್ಳಿಯ ದೇವಸ್ಥಾನದಲ್ಲೂ ಅಖಂಡ ದರ್ಶನ ಅವಕಾಶ ನೀಡಲಾಯಿತು. ಯರವನಾಗ್ತಿಹಳ್ಳಿ ಕ್ಯಾಂಪ್‌ನ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿವಿಧ ಪೂಜೆಗಳು ನಡೆದವು. ಚನ್ನಗಿರಿ ತಾಲ್ಲೂಕಿನ ವೆಂಕಟೇಶ್ವರ ಪುರದಲ್ಲಿ ಶ್ರೀದೇವಿ ದೇವಿ ಭೂದೇವಿ ಸಹಿತ ಶ್ರೀ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

# ಶ್ರೀ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆದ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಜ. 11 - ವೈಕುಂಠ ಏಕಾದಶಿ ಹಿನ್ನೆಲೆಯಲ್ಲಿ ಲೋಕಸಭಾ ಸದಸ್ಯರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ನಗರದ ಎಂಸಿಸಿ 'ಬಿ' ಬ್ಲಾಕ್ ನಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನಕ್ಕೆ ಕುಟುಂಬ ಸದಸ್ಯರೊಂದಿಗೆ ಭೇಟಿ ನೀಡಿ ಶ್ರೀ ವೆಂಕಟೇಶ್ವರ ಸ್ವಾಮಿಯ ದರ್ಶನ ಪಡೆದರು.

ಈ ವೇಳೆ ದೇವಸ್ಥಾನದ ಆಡಳಿತ ಮಂಡಳಿಯವರು ಸಂಸದರನ್ನು ಸನ್ಮಾನಿಸಿ ಗೌರವಿಸಿದರು. ಬಳಿಕ ಸಂಸದರು ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಾಲಯಕ್ಕೂ ತೆರಳಿ ದೇವಿಯ ದರ್ಶನಾಶೀರ್ವಾದ ಪಡೆದರು.

ನಂತರ ತಮ್ಮ ಗೃಹ ಕಚೇರಿಗೆ ಭೇಟಿ ನೀಡಿದ ಸಾರ್ವಜನಿಕರು ಹಾಗೂ ಮುಖಂಡರೊಂದಿಗೆ ವಿವಿಧ ವಿಷಯಗಳ ಕುರಿತು ಚರ್ಚೆ ನಡಸಿದರು.





# ಭಾನುವಳ್ಳಿಯಲ್ಲಿ ಸಂಭ್ರಮದ ವೈಕುಂಠ ಏಕಾದಶಿ

ಮಲೇಬೆನ್ನೂರು, ಜ. 10- ಭಾನುವಳ್ಳಿ ಗ್ರಾಮದ ಆರಾಧ್ಯ ದೈವ ಶ್ರೀ ಲಕ್ಷ್ಮೀ ನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ಮಾಡಲಾಗಿದ್ದ ವಿಶೇಷ ಪೂಜೆ, ಅಲಂಕಾರ ಭಕ್ತರ ಗಮನ ಸೆಳೆಯಿತು. ದ್ವಿತೀಯ ಬಾರಿಗೆ ತಿರುಕಲ್ಯಾಣ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಸಾವಿರಾರು ಭಕ್ತರು ದೇವಸ್ಥಾನಕ್ಕೆ ಆಗಮಿಸಿ ನಾರಾಯಣಸ್ವಾಮಿಯ ದರ್ಶನ ಪಡೆದರು. ಸಂಜೆ ಗ್ರಾಮದಲ್ಲಿ ಶ್ರೀದೇವಿ ಭೂ ದೇವಿ ಹಾಗೂ ಶ್ರೀಮನ್ನಾರಾಯಣ ಸ್ವಾಮಿಯ ಪಲ್ಲಕ್ಕಿ ಉತ್ಸವವು ವಿಜೃಂಭಣೆಯಿಂದ ಜರುಗಿತು. ಮಂಗಳೂರಿನ ಚಾಂಡಿಮೇಳ ಸೇರಿದಂತೆ ವಿವಿಧ ಕಲಾ ಮೇಳಗಳು ಉತ್ಸವಕ್ಕೆ ಮೆರಗು ತಂದವು.


ಕುಂದುವಾಡ ಕೆರೆ ಪಕ್ಕದ ಬಾಲಾಜಿ ನಗರದಲ್ಲಿನ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಅಂಗವಾಗಿ ವಿಶೇಷ ಅಲಂಕಾರ ಮಾಡಲಾಗಿತ್ತು.




ದಾವಣಗೆರೆ ನಗರದ ಬೇತೂರು ರಸ್ತೆಯ ಲಕ್ಷ್ಮಿವೆಂಕಟೇಶ್ವರ ದೇವಾಲಯದಲ್ಲೂ ವೈಕುಂಠ ಏಕಾದಶಿ ನಡೆದಿದ್ದು, ಭಕ್ತರು ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿ, ದರ್ಶನ ಪಡೆದರು.

# ಏಕಾದಶಿ: ಹರಿಹರೇಶ್ವರನ ದರ್ಶನಕ್ಕೆ ಭಕ್ತರ ಸಾಲು





**ಹರಿಹರ**

ಹರಿಹರ, ಜ.10- ನಗರದ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ಬೆಳಗಿನ ಜಾವದಲ್ಲಿ ಶ್ರೀ ಹರಿಹರೇಶ್ವರ ಸ್ವಾಮಿ ಮತ್ತು ಲಕ್ಷ್ಮೀ ದೇವಿಗೆ ವಿಶೇಷ ಅಭಿಷೇಕ, ಅಲಂಕಾರ, ನೈವೇದ್ಯ, ತುಳಸಿ ಅರ್ಚನೆ, ವಿಷ್ಣು ಸಹಸ್ರ ನಾಮ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಿತು.

ಸಂಜೆ ವಿವಿಧ ಮಹಿಳಾ ಮಂಡಳಿಯ ವರಿಂದ ಭಜನೆ ಮತ್ತು ಸಂಗೀತ ಸೇವೆ ಮುಂತಾದ ಪೂಜಾ ಕಾರ್ಯಕ್ರಮಗಳ ನಡೆದವು. ನೂರಾರು ಸಂಖ್ಯೆಯಲ್ಲಿ ಭಕ್ತರು ದೇವಸ್ಥಾನಕ್ಕೆ ಆಗಮಿಸಿ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ನಿನ್ನೆ ರಾತ್ರಿ 'ನಮ್ಮ ಊರು, ನಮ್ಮ ಹೊಣೆ' ತಂಡದವರಿಂದ ದೇವಸ್ಥಾನ ಸುತ್ತ ಸ್ವಚ್ಛತೆ ಮಾಡುವ ಮೂಲಕ ರಂಗೋಲಿ ಹಾಕಿ ದೇವಸ್ಥಾನವನ್ನು ಅಲಂಕಾರ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಪ್ರಧಾನ ಅರ್ಚಕರಾದ ಶ್ರೀನಿವಾಸ ಮೂರ್ತಿ, ಗುರುಪ್ರಸಾದ್, ವಾರಿಜಾ ವೆಂಕಟೇಶ, ಶೇಷಾಚಲ, ಅಮರಾವತಿ ಮಹಾದೇವಪ್ಪ, ರಾಟಿ ರಮೇಶ್, ಕರಿಬಸಪ್ಪ ಕಂಚಿಕೇರಿ, ಅಂಜು ಸುರೇಶ್ ರಾಜೇನವರ್, ಅಶ್ವಿನಿ ಕೃಷ್ಣ, ಸಾಕಮ್ಮ ಸಾಕ್ಷಿ ಶಿಂಧೆ, ರಾಘವೇಂದ್ರ ತೇಲ್ಕರ್, ಗಂಗಾಧರ್ ದುರುಗೋಜಿ, ಟಿ.ಸಿ. ನಿರಂಜನ ಹಾಗೂ ಇತರರು ಇದ್ದರು.

# ಕುಂಭ ಮೇಳಕ್ಕೆ ಬರುವವರಿಗೆ ಕೇವಲ 9 ರೂ.ಗೆ ಫುಲ್ ಊಟ



ಪ್ರಯಾಗ್‌ರಾಜ್, ಜ.10- ಮಹಾ ಕುಂಭ ಮೇಳಕ್ಕೆ ಬರುವವರಿಗೆ ಕೇವಲ 9 ರೂ.ಗೆ ಫುಲ್ ಊಟ ನೀಡುವ 'ಮಾ ಕಿ ರಸೋಯಿ' ಎಂಬ ಸಮುದಾಯ ಅಡುಗೆ ಮನೆ ಯನ್ನು ಶುಕ್ರವಾರ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಉದ್ಘಾಟಿಸಿದರು.

ಈ ಸಮುದಾಯ ಅಡುಗೆ ಮನೆಯನ್ನು ಸ್ವರೂಪ್ ರಾಣಿ ನೆಹರು ಆಸ್ಪತ್ರೆಯಲ್ಲಿ ನಂದಿ ಸೇವಾ ಸಂಸ್ಥಾನ ನಿರ್ವಹಿಸುತ್ತದೆ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದ ಜನರನ್ನು ಬೆಂಬಲಿಸಲು ಉತ್ತರ ಪ್ರದೇಶ ಸರ್ಕಾರ ಈ ಯೋಜನೆ ಘೋಷಿಸಿದೆ.

ಪ್ರಯಾಗ್‌ರಾಜ್‌ಗೆ ಭೇಟಿ ನೀಡಿದ ಸಿಎಂ ಯೋಗಿ ಆದಿತ್ಯನಾಥ್ ಅವರು ಆಸ್ಪತ್ರೆಯ ಸೌಲಭ್ಯಗಳನ್ನು ಪರಿಶೀಲಿಸಿದರು ಮತ್ತು ಉಪಕ್ರಮದ ಉದ್ಘಾಟನೆಯ ಸಂದರ್ಭದಲ್ಲಿ ಹಾಜರಿದ್ದವರಿಗೆ ವೈಯಕ್ತಿಕವಾಗಿ ಆಹಾರವನ್ನು ನೀಡಿದರು. ಮಹಾಕುಂಭ ಮೇಳದ ಸಮಯದಲ್ಲಿ ಭಕ್ತರು, ನಿವಾಸಿಗಳಿಗೆ ಕೈಗೆಟಕುವ ಮತ್ತು ಪೌಷ್ಟಿಕಾಂಶದ ಊಟವನ್ನು ಖಾತ್ರಿಪಡಿಸುವಲ್ಲಿ ಈ ಯೋಜನೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

# ಪುಸ್ತಕಗಳು ಯುವ ಮನಸ್ಸಿನ ಮೇಲೆ ಶಾಶ್ವತ ಪರಿಣಾಮ ಉಂಟುಮಾಡುತ್ತವೆ : ಉಷಾ ಉತ್ತುಪ್

ಕೋಲ್ಕತ್ತಾ, ಜ.10- ಸಾಮಾಜಿಕ ಮಾಧ್ಯಮದಲ್ಲಿನ ಪೋಸ್ಟ್‌ಗಳಿಗಿಂತ ಪುಸ್ತಕಗಳು ಯುವ ಮನಸ್ಸಿನ ಮೇಲೆ ಶಾಶ್ವತವಾದ ಪರಿಣಾಮ ಉಂಟುಮಾಡುತ್ತವೆ ಎಂದು ಭಾರತದ ಪಾಪ್ ಐಕಾನ್ ಉಷಾ ಉತ್ತುಪ್ ಹೇಳಿದ್ದಾರೆ.

ಶುಕ್ರವಾರ ಅಪೀಜಯ್ ಕೋಲ್ಕತ್ತಾ ಸಾಹಿತ್ಯೋತ್ಸವದ (ಎಕೆಎಲ್‌ಎಫ್) 16ನೇ ಆವೃತ್ತಿಯನ್ನು ಉದ್ಘಾಟಿಸಿದ ಅವರು, ಯುವ ಪೀಳಿಗೆ ಸಾಹಿತ್ಯದೊಂದಿಗೆ ಮರು ಸಂಪರ್ಕಿಸುವಂತೆ ಒತ್ತಾಯಿಸಿದರು.

"ಪುಸ್ತಕಗಳನ್ನು ಓದುವುದು... ಪುಸ್ತಕಗಳನ್ನು ಅನುಭವಿಸುವುದು ... ಇದು ಸಂಪೂರ್ಣವಾಗಿ ವಿಭಿನ್ನವಾದ ಅನುಭವವಾಗಿದೆ. ಅದಕ್ಕೆ ಎಂದಿಗೂ ವಯಸ್ಸಾಗುವುದಿಲ್ಲ. ಮುದ್ರಿತ ಪದಗಳು ಯುವ ಮನಸ್ಸಿನ ಮೇಲೆ ಶಾಶ್ವತವಾದ ಪ್ರಭಾವವನ್ನು ಉಂಟುಮಾಡುತ್ತವೆ ಎಂದು ಉತ್ತುಪ್ ಹೇಳಿದ್ದಾರೆ.


## ICAR-TARALABALU KRISHI VIGYAN KENDRA, DAVANGERE

(Sanctioned & Funded by Indian Council of Agricultural Reseacrch, New Delhi) **Kadalivana, Taralabalu KVK Road, LIC Colony Layout, Davanagere-577 004, Karnataka, India**

### Job Notification

Applications are invited from eligible candidates for the following post at ICAR-Taralabalu Krishi Vigyan Kendra, Kadalivana, Taralabalu KVK Road, LIC Colony Layout, Davangere-577 004, funded by Indian Council of Agricultural Research, Delhi.

| Sl. No. | Designation & Pay Band of the post | No. Of Post | Qualification | Pay Seale & Grade pay |
|---|---|---|---|---|
| 01) | Subject Matter Specialist (Soil Science) | 01 | Essential Qualification : Master's Degree in Soil Science or equivalent qualification from recognized University Maximum Age Limit : 35 years | **Level 10 of 7th CPC** (Pre-revised Rs. 15,600-39100+GP Rs. 5,400/-) Basic Rs. 56,100/- |

1) Candidates are informed to submit their signed and duly filled in application with relevant self-attested documents to **"The Secretary, Taralablu Rural Development Foundation, ICAR-Taralabalu Krishi Vegyan Kendra, Kadalivana, Taralabalu KVK Road, LIC Colony Layout, Davangere-4. Karnataka"** within 30 days from the date of advertisement in Employment News.
2) for further details regarding Age limit, Qualification, Applications format and other Terms & Conditions, candidates are informed to visit the Website https://www.taralabalukvk.com
**3) General Instructions :** 1) Only Eligible candidates will be called for selection process. 2) No TA/DA will be admissible to attend the interview. 3) Age relaxation to SC/ST/OBC/PH candidates will be as per Govt. of India Rules.

Sd/- **Secretary**
Taralabalu Rural Development Foundation
Sirigere-577 541, Chitradurga Dist, Karnataka



## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ:ಕರಾಸಾ/ದಾವಿ/ಸಕಾನಿಅ/422/2024–25 ದಿನಾಂಕ :08.01.2025

**ಬಹಿರಂಗ ಹರಾಜು ಪ್ರಕಟಣೆ ಸಂಖ್ಯೆ :01/2024–25**

**"ದಾವಣಗೆರೆ ನಗರದ ಹೈಸ್ಕೂಲ್ ಮೈದಾನದಲ್ಲಿರುವ ಕ.ರಾ.ರ.ಸಾ.ನಿಗಮದ ತಾತ್ಕಾಲಿಕ ಬಸ್‌ನಿಲ್ದಾಣವನ್ನು ನೆಲಸಮಗೊಳಿಸುವುದು ಮತ್ತು ನಿಲ್ದಾಣದ ಆವರಣವನ್ನು ಈ ಹಿಂದಿನ ಹೈಸ್ಕೂಲ್ ಮೈದಾನದಂತೆಯೇ ಗ್ರಾವೆಲ್ ತುಂಬಿ ಸಮತಟ್ಟು ಮಾಡುವುದು"** ಈ ಕಾಮಗಾರಿ ಕೆಲಸವನ್ನು ನಿರ್ವಹಿಸುವ ಷರತ್ತಿನೊಂದಿಗೆ ಸದರಿ ಕಟ್ಟಡದಲ್ಲಿ ದೊರಕುವಂತಹ ಸಾಮಾಗ್ರಿಗಳನ್ನು ಸಾರ್ವಜನಿಕ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ನಿಗಮದಿಂದ ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ ಸದರಿ ಕೆಲಸಕ್ಕೆ **"ಹೇಗಿದೆಯೋ ಹಾಗೇ" (AS IS WHERE IS AND AS IS WHAT IS BASIS)** ದಿನಾಂಕ: **15.01.2025 ರಂದು ಅಪರಾಹ್ನ 15.30 ಗಂಟೆಗೆ** ಕ.ರಾ.ರ.ಸಾ.ನಿಗಮದ ನೂತನ ಬಸ್ ನಿಲ್ದಾಣದ ಕಟ್ಟಡದ ವಿಭಾಗೀಯ ಕಛೇರಿಯ ಅವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು. ಆಸಕ್ತದಾರರು ಕಛೇರಿ ಕೆಲಸದ ವೇಳೆಯಲ್ಲಿ ಷರತ್ತು ಮತ್ತು ನಿಭಂಧನೆಗಳ ಪ್ರತಿಯನ್ನು ಪಡೆಯಬಹುದಾಗಿರುತ್ತದೆ. ಮತ್ತು ಹರಾಜಿನಲ್ಲಿ ಭಾಗವಹಿಸುವವರು ರಾಷ್ಟ್ರೀಕೃತ ಬ್ಯಾಂಕಿನಲ್ಲಿ **ರೂ. 88,540.00 ಗಳ** ಡಿಡಿಯನ್ನು ವಿಭಾಗೀಯ ನಿಯಂತ್ರಣಾಧಿಕಾರಿ, ಕರಾರಸಾ ನಿಗಮ, ದಾವಣಗೆರೆ ವಿಭಾಗ ಇವರ ಹೆಸರಿನಲ್ಲಿ ಪಡೆದು **ದಿನಾಂಕ: 15.01.2025ರಂದು ಕಛೇರಿ ಸಮಯ ಅಪರಾಹ್ನ 13.00ಗಂಟೆಯೊಳಗೆ** ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕಾಮಗಾರಿ ಉಪ ವಿಭಾಗ, ಕರಾರಸಾ ನಿಗಮ, ದಾವಣಗೆರೆ ಇವರಲ್ಲಿ ಸಲ್ಲಿಸಿ ಹೆಸರನ್ನು ನೊಂದಾಯಿಸಿಕೊಂಡು ಭಾಗವಹಿಸಬಹುದಾಗಿರುತ್ತದೆ.

ಹಾಗೂ ಹೆಚ್ಚಿನ ವಿವರಗಳಿಗಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕಾಮಗಾರಿ ಉಪ ವಿಭಾಗ ದಾವಣಗೆರೆ ವಿಭಾಗ–577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು–7760990457.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ

ವಾಸಾಸಂಇ/ವಾಪ್ರ/ಜಿಎ/4293/2024–25


## ನಗರದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್ ವತಿಯಿಂದ ಡಾ॥ ಶಾಮನೂರು ಶಿವಶಂಕರಪ್ಪನವರ ಯೋಗಕ್ಷೇಮ ವಿಚಾರಣೆ



ಬೆಂಗಳೂರಿನಲ್ಲಿ ಹಿರಿಯ ಮುತ್ಸದ್ದಿಗಳು, ಶಾಸಕರಾದ

**ಡಾ॥ ಶಾಮನೂರು ಶಿವಶಂಕರಪ್ಪನವರನ್ನು ನಗರದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್‌ನ ಧರ್ಮದರ್ಶಿಗಳು ಹಾಗೂ ಬಾಬುದಾರರು**

ಜ.10ರ. ಶುಕ್ರವಾರ ಭೇಟಿ ಮಾಡಿ ಯೋಗಕ್ಷೇಮ, ಆರೋಗ್ಯ ವಿಚಾರಿಸಿದರು. ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿಯ ಪ್ರಸಾದ ನೀಡಿ, ಶತಾಯುಷಿಗಳಾಗಲೆಂದು ಶುಭ ಕೋರಿದರು.

ಈ ಸಂದರ್ಭದಲ್ಲಿ ಆಲೂರು ಪ್ರಕಾಶ್, ಗೋಣೆಪ್ಪ, ಉಮೇಶ್ ಸಾಳಂಕಿ, ಕವಿರಾಜ್, ಗೌಡ್ರು ಸುರೇಶ್, ಶಂಕರ್ ರಾವ್ ಶಿಂಧೆ, ಬಾಳೆಹೊಲದ ರೇವಣಸಿದ್ದಪ್ಪ, ಚೌಡಪ್ಪ ದೇವರಮನೆ, ಆರ್. ವೆಂಕಟೇಶ್, ಬೀರೇಶ್, ಗೌಡ್ರು ರಾಮಣ್ಣ, ಕರಿಬಸಪ್ಪ, ಎಲ್.ಬಿ.ಬಸಣ್ಣ, ಕರೇಶಿವಪ್ಪ ಲಿಂಗರಾಜ್ ಮತ್ತಿತರರಿದ್ದರು.

# ನುಡಿ ಜಾತ್ರೆಗೆ ಮಧುವಣಗಿತ್ತಿಯಂತೆ ಸಜ್ಜಾದ ಜಗಳೂರು

ಜಗಳೂರಿನಲ್ಲಿ ಇಂದಿನಿಂದ ಮೂರು ದಿನ ನಡೆಯಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಜಲೋತ್ಸವ ಕಾರ್ಯಕ್ರಮಕ್ಕೆ ಝಗಮಗಿಸುತ್ತಾ ಜಗಳೂರು ಮದುವಣಗಿತ್ತಿಯಂತೆ ಶೃಂಗಾರಗೊಂಡಿದೆ.



ಪಟ್ಟಣದ ಬಯಲು ರಂಗಮಂದಿರದಲ್ಲಿ ಎರಡು ದಿನಗಳ ಕಾಲ ನಡೆಯುವ ಜಿಲ್ಲಾ ಸಾಹಿತ್ಯ ಸಮ್ಮೇಳನದ ಮೊದಲನೇ ದಿನದಂದು ಸಾಹಿತಿ ಎ.ಬಿ. ರಾಮಚಂದ್ರಪ್ಪ ಅವರ ಸಮ್ಮೇಳನದ ಸರ್ವಾಧ್ಯಕ್ಷರ ನೇತೃತ್ವದಲ್ಲಿ 14 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬೆಳಿಗ್ಗೆ 8 ಗಂಟೆಗೆ ರಾಷ್ಟ್ರ, ನಾಡ ಧ್ವಜಗಳ ಧ್ವಜಾರೋಹಣ, 9 ಗಂಟೆಗೆ ಮೆರವಣಿಗೆ ಬೆಳ್ಳಿ ರಥದ ಮೂಲಕ 100 ಡೊಳ್ಳು, ಹಲಗೆ, ಕಹಳೆ, ವಾದ್ಯವೃಂದಗಳು, 10 ಕಲಾತಂಡಗಳಳು ಭಾಗವಹಿಸಲಿವೆ.

ಕುಂಭಮೇಳ ತಹಶೀಲ್ದಾರ್ ಕಛೇರಿ ಮುಖಾಂತರ, ಅಂಬೇಡ್ಕರ್ ವೃತ್ತದ ಮೂಲಕ ಮಹಾತ್ಮಗಾಂಧಿ ರಸ್ತೆ ಮುಖಾಂತರ ಬಯಲು ರಂಗಮಂದಿರ ತಲುಪಲಿದೆ.

ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ನೆರವೇರಿಸಲಿದ್ದಾರೆ. 5000 ಆಸನದ ವ್ಯವಸ್ಥೆ ಕಲ್ಪಿಸಲಾಗಿದೆ. ಶಾಸಕರ ಸಂಕಲ್ಪದಂತೆ ಕಾರ್ಯಕ್ರಮ ಯಶಸ್ವಿಗೊಳ್ಳಲಿದೆ. ಗೋಷ್ಠಿಗಳು ನಡೆಯಲಿವೆ. ಸಮಾರೋಪ ಸಮಾರಂಭದಲ್ಲಿ ಹಿರಿಯ ಚಿಂತಕ ಬರಗೂರು ರಾಮಚಂದ್ರಪ್ಪ ಭಾಗವಹಿಸಲಿದ್ದಾರೆ .

ಶುಕ್ರವಾರ ಶಾಸಕ ಬಿ.ದೇವೇಂದ್ರಪ್ಪ ಅವರು ಸಜ್ಜುಗೊಳ್ಳುತ್ತಿರುವ ವೇದಿಕೆಯನ್ನು ವೀಕ್ಷಿಸಿದರು. ಸಂದರ್ಭದಲ್ಲಿ ಸಾಹಿತಿ ಎನ್. ಟಿ.ಎರ್ರಿಸ್ವಾಮಿ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಎ.ಎಲ್. ತಿಪ್ಪೇಸ್ವಾಮಿ,ಪ.ಪಂ ಸದಸ್ಯರಾದ ಶಕೀಲ್ ಅಹಮ್ಮದ್, ಮುಖಂಡರಾದ ಮಹೇಶ್ವರಪ್ಪ, ಮಾಜಿ ಮಂಜಣ್ಣ, ಕಾಂತರಾಜ್, ಪ್ರಕಾಶ್ ರೆಡ್ಡಿ ಸೇರಿದಂತೆ ಇದ್ದರು.

# ಒಂದು ಕಣ್ಣಿಗೆ ಹಾನಿಯಾಗಿದ್ದರೂ ಶೇ.100 ಅಂಗವೈಕಲ್ಯ : ಸುಪ್ರೀಂ

ನವದೆಹಲಿ, ಜ.10- ವಜ್ರ ಕತ್ತರಿಸುವುದಕ್ಕೆ ಅಗಾಧ ಕುಶಲತೆ, ಭಾರೀ ನಿಖರತೆಯ ಅಗತ್ಯವಿದೆ. ಈ ಕಾರ್ಯದಲ್ಲಿ ತೊಡಗಿರುವ ವ್ಯಕ್ತಿ ಒಂದು ಕಣ್ಣು ಕಳೆದುಕೊಂಡಿದ್ದರೂ, ಆತನದು ಶೇ 100ರಷ್ಟು ಅಂಗವೈಕಲ್ಯ ಎಂದು ಹೇಳಿರುವ ಸುಪ್ರೀಂ ಕೋರ್ಟ್, ವ್ಯಕ್ತಿಗೆ ನೀಡಬೇಕಾದ ಪರಿಹಾರ ಮೊತ್ತವನ್ನು ಹೆಚ್ಚಿಸಿ ಆದೇಶಿಸಿದೆ.

ಕೇರಳದ ಜಯನಂದನ್ ಎಂಬುವವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಈ ಮಾತು ಹೇಳಿರುವ ಸುಪ್ರೀಂ ಕೋರ್ಟ್, ಅರ್ಜಿದಾರರಿಗೆ ಶೇ8ರ ಬಡ್ಡಿಯೊಂದಿಗೆ ಒಟ್ಟು 15,98, 000 ರೂ. ಪರಿಹಾರ ನೀಡಬೇಕು ಎಂದು ನಿರ್ದೇಶನ ನೀಡಿದೆ.

39 ವರ್ಷದ ಜಯನಂದನ್ ಅವರು ಶೇ 65ರಷ್ಟು ಅಂಗವೈಕಲ್ಯ ಹೊಂದಿರುವುದಾಗಿ ಕೇರಳ ಹೈಕೋರ್ಟ್ ತೀರ್ಪು ನೀಡಿತ್ತು. ಈ ತೀರ್ಪು ಪ್ರಶ್ನಿಸಿ, ಜಯನಂದನ್ ಮೇಲ್ಮನವಿ ಸಲ್ಲಿಸಿದ್ದರು. ನ್ಯಾಯಮೂರ್ತಿ ಗಳಾದ ಸಂಜಯ ಕರೋಲ್ ಹಾಗೂ ಮನಮೋಹನ ಅವರು ಇದ್ದ ನ್ಯಾಯಪೀಠ ಮೇಲ್ಮನವಿ ವಿಚಾರಣೆ ನಡೆಸಿತು.

ಜಯನಂದನ್ ಅವರು 2005ರ ಫೆಬ್ರವರಿ 15ರಂದು ಕುನ್ನಂಕುಳಂ ವಡಂಕೇರಿಗೆ ಬೈಕ್ ಮೇಲೆ ತೆರಳುತ್ತಿದ್ದ ವೇಳೆ, ಆಟೋವೊಂದಕ್ಕೆ ಡಿಕ್ಕಿಯಾಗಿ ಅಪಘಾತ ಸಂಭವಿಸಿತ್ತು. ಈ ಅಪಘಾತದಲ್ಲಿ ಅವರು ಒಂದು ಕಣ್ಣಿನ ದೃಷ್ಟಿ ಕಳೆದುಕೊಂಡಿದ್ದರು.

ತ್ರಿಶ್ಶೂರಿನ ಮೋಟಾರ್ ಅಪಘಾತ ಕ್ಲೇಮುಗಳ ನ್ಯಾಯಮಂಡಳಿಯು ಜಯನಂದನ್ ಅವರ ಅಂಗವೈಕಲ್ಯ ಶೇ 49ರಷ್ಟು ಎಂದು ತೀರ್ಮಾನಿಸಿ, ಅವರಿಗೆ ಶೇ. 8ರ ಬಡ್ಡಿಯೊಂದಿಗೆ 8.70 ಲಕ್ಷ ರೂ. ಪರಿಹಾರ ನೀಡುವಂತೆ ಆದೇಶಿಸಿತ್ತು.

ನ್ಯಾಯಮಂಡಳಿ ಆದೇಶ ಪ್ರಶ್ನಿಸಿ ಅವರು ಹೈಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್ ಪರಿಹಾರ ಮೊತ್ತವನ್ನು 10,57,500ರೂ.ಗೆ ಹೆಚ್ಚಿಸಿ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಕದ ತಟ್ಟಿದ್ದರು.

# ಹಿಂದುಳಿದ ವರ್ಗಗಳ ಆಯೋಗದ ವರದಿ ತಿರಸ್ಕರಿಸಲು ಒಕ್ಕಲಿಗರ ಸಂಘದ ಆಗ್ರಹ

ಬೆಂಗಳೂರು, ಜ.10- ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿ ಅವೈಜ್ಞಾನಿಕವಾಗಿದ್ದು, ಇದನ್ನು ತಿರಸ್ಕರಿಸಬೇಕು ಎಂದು ರಾಜ್ಯ ಒಕ್ಕಲಿಗರ ಸಂಘ ಸರ್ಕಾರವನ್ನು ಇಂದಿಲ್ಲಿ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಬಿ.ಕೆಂಚಪ್ಪಗೌಡ, ಹಿಂದುಳಿದ ವರ್ಗಗಳ ಆಯೋಗ 2014-15ರಲ್ಲಿ ಸಮೀಕ್ಷೆ ನಡೆಸಿತ್ತು, ಮನೆ ಮನೆಗೆ ತೆರಳಿ ಮಾಹಿತಿ ಪಡೆದಿಲ್ಲ ಎಂಬ ಆರೋಪವಿದೆ, ಈ ಹಿನ್ನೆಲೆಯಲ್ಲಿ ಯಾವುದೇ ಕಾರಣಕ್ಕೂ ವರದಿ ಅನುಷ್ಠಾನಕ್ಕೆ ತರಬಾರದು ಎಂದರು.

ಆಯೋಗದ ವರದಿ ಅನುಷ್ಠಾನ ವಿರೋಧಿಸಿ, ಮುಂದಿನ ಹೋರಾಟದ ರೂಪುರೇಷೆ ನಿರ್ಧರಿಸಲು ಬರುವ ಭಾನುವಾರ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ಸಮುದಾಯದ ಸಚಿವರು, ಶಾಸಕರು ಪಕ್ಷಾತೀತವಾಗಿ ಸಭೆ ಸೇರಿ, ಜನಾಂಗದ ಹಿತ ಕಾಪಾಡುವ ಹೋರಾಟದ ಕುರಿತು ನಿರ್ಧರಿಸಲಾಗುವುದು ಎಂದರು.

ಪ್ರಸ್ತುತ ವರದಿ ನ್ಯೂನತೆಯಿಂದ ಕೂಡಿದೆ, ವರದಿಯಲ್ಲಿ ರಾಜ್ಯದಲ್ಲಿ 5.98 ಕೋಟಿ ಜನಸಂಖ್ಯೆ ಇದೆ ಎಂದಿದ್ದು, ಆಧಾರ್ ದಾಖಲೆ ಪ್ರಕಾರ 7 ಕೋಟಿ ಜನಸಂಖ್ಯೆ ಇದೆ, ಒಂದು ಕೋಟಿ ಜನಸಂಖ್ಯೆ ಸಮೀಕ್ಷೆಯಿಂದ ಹೊರಗುಳಿದಿದೆ.

10 ವರ್ಷ ಹಳೆಯ ಸಮೀಕ್ಷಾ ವರದಿ ಅನುಷ್ಠಾನದಿಂದ ಒಕ್ಕಲಿಗ, ಲಿಂಗಾಯತ, ವೀರಶೈವ ಸೇರಿ ಹಲವು ಸಮುದಾಯಗಳಿಗೆ ಅನ್ಯಾಯ ವಾಗುತ್ತದೆ. ಸರ್ಕಾರ ವರದಿ ಅನುಷ್ಠಾನಕ್ಕೆ ಮುಂದಾದರೆ, ಲಿಂಗಾಯತ ಹಾಗೂ ಇತರೆ ಸಮುದಾಯಗಳ ಜೊತೆಗೂಡಿ ಹೋರಾಟ ಮಾಡಲಾಗುವುದಲ್ಲದೇ ಕಾನೂನು ಹೋರಾಟಕ್ಕೂ ಸಿದ್ಧ ಎಂದರು.

ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪ ರೆಡ್ಡಿ ಮಾತನಾಡಿ, ಆಯೋಗ ಶೇ.40ರಷ್ಟು ಮನೆಗಳಿಗೆ ಭೇಟಿಯನ್ನೇ ನೀಡಿಲ್ಲ, ಇದು ಅವೈಜ್ಞಾನಿಕ ವರದಿ, ಕಳೆದ 10 ವರ್ಷಗಳಲ್ಲಿ ಸಾಕಷ್ಟು ಬೆಳವಣಿಗೆ ಯಾಗಿದೆ, ಮಳೆ-ಬೆಳೆಯಿಲ್ಲದೆ ರೈತಾಪಿ ಜನರ ಆದಾಯ ಕುಸಿತವಾಗಿ ತೊಂದರೆಗೆ ಸಿಲುಕಿದ್ದಾರೆ, ಆದ್ದರಿಂದ ವರದಿ ತಿರಸ್ಕರಿಸಬೇಕು ಎಂದರು.

ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಗಾ.ನಂ.ಶ್ರೀಕಂಠಯ್ಯ ಮಾತನಾಡಿ, 10 ವರ್ಷ ಹಳೆಯ ವರದಿಯನ್ನು ತರಾತುರಿಯಲ್ಲಿ ಅನುಷ್ಠಾನ ಮಾಡಬಾರದು, ಜಾತಿಗಣತಿ ನಡೆಸುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ, ಕೇಂದ್ರ ಸರ್ಕಾರ ನಡೆಸಬೇಕು, ಆಧಾರ್ ಸಂಖ್ಯೆ ಹಾಗೂ ಜಿಯೋ ಟ್ಯಾಗ್ ಆಧಾರದ ಮೇಲೆ ವೈಜ್ಞಾನಿಕ ಪರೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿದರು.

# ನಗರದಲ್ಲಿ ಇಂದಿನಿಂದ ಮೂರು ದಿನ ಶ್ರೀ ಉತ್ಸವಾಂಭ ದೇವಿ ಜಾತ್ರೋತ್ಸವ



ವಸಂತ ರಸ್ತೆ ಹಾಲೇಶ್ವರ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಭದೇವಿ, ಶ್ರೀ ಚೌಡೇಶ್ವರಿದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ, ಶ್ರೀ ಮಹಾಲಕ್ಷ್ಮೀದೇವಿ ದೇವಸ್ಥಾನದಲ್ಲಿ ಇಂದಿನಿಂದ ಮೂರು ದಿನ ಶ್ರೀ ದೇವಿಯವರ ಜಾತ್ರಾ ಮಹೋತ್ಸವ ನಡೆಯಲಿದೆ.

13ರಂದು ಬೆಳಗಿನ ಜಾವ 4-30ಕ್ಕೆ ತಾಯಿಯವರಿಗೆ ರುದ್ರಾಭಿಷೇಕ, ಸಹಸ್ರ, ಬಿಲ್ವಾರ್ಚನೆ, ಪುಷ್ಪ ಅಲಂಕಾರ ಪೂಜೆ ಹಾಗೂ 9-30 ರಿಂದ ಸರ್ವ ಭಕ್ತಾಧಿಗಳಿಗೂ ಉಡಿ ಅಕ್ಕಿ ಸೇವೆ ಮತ್ತು 12-30ಕ್ಕೆ ಪ್ರಸಾದ ವಿನಿಯೋಗ ಕಾರ್ಯಕ್ರಮವಿರುತ್ತದೆ ಮತ್ತು ಸಂಜೆ 5-30ಕ್ಕೆ ಮಾತ್ರೋತ್ರಿಯವರ ಮೆರವಣಿಗೆ ಇರುತ್ತದೆ.

# ನಗರದಲ್ಲಿ ನಾಳೆ ಉಚಿತ ಯೋಗ ಶಿಬಿರ

ದಾವಣಗೆರೆ, ಜ.10- ಮಕರ ಸಂಕ್ರಾಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ ನಿಮಿತ್ತವಾಗಿ ನಗರದ ಸರ್.ಎಂ. ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ನಾಡಿದ್ದು ದಿನಾಂಕ 12 ರಿಂದ ನಿರಂತರವಾಗಿ ಪ್ರತಿ ನಿತ್ಯ ಬೆಳಿಗ್ಗೆ 6 ರಿಂದ 7 ರವರೆಗೆ ಉಚಿತ ಯೋಗ ಶಿಬಿರ ನಡೆಯಲಿದೆ.

ಶಿಬಿರದಲ್ಲಿ ಅಗ್ನಿಹೋತ್ರ, ಸೂರ್ಯ ನಮಸ್ಕಾರ, ಗುರು ನಮಸ್ಕಾರ, ಯೋಗಾಸನ, ಪ್ರಾಣಾಯಾಮ, ಧ್ಯಾನ, ಮುದ್ರಾ ಯೋಗ ಇನ್ನೂ ಮುಂತಾದ ವಿಷಯಗಳನ್ನು ಹೇಳಿಕೊಡಲಾಗುವುದು. ಕಾರ್ಯಕ್ರಮದ ಉದ್ಘಾಟನೆಯನ್ನು ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಕೆ. ಪ್ರಸನ್ನಕುಮಾರ್ ಅಂದು ಬೆಳಿಗ್ಗೆ 6 ಕ್ಕೆ ನೆರವೇರಿಸಲಿದ್ದಾರೆ. ಆಸಕ್ತರು ಯೋಗ ಶಿಕ್ಷಕ ಮಹಾಂತೇಶ್ (94493-69592) ಸಂಪರ್ಕಿಸಬಹುದು.

# ನಗರಕ್ಕೆ ಇಂದು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್



ಆರ್.ಎಲ್.ಕಾನೂನು ಕಾಲೇಜಿನಲ್ಲಿ ಇಂದು ಬೆಳಿಗ್ಗೆ 11ಕ್ಕೆ ಆಯೋಜಿಸಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು ಕಾನೂನು ಮತ್ತು ಧರ್ಮ ಕುರಿತು ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್.ಅರುಣಕುಮಾರ್, ಹೈಕೋರ್ಟ್ ವಕೀಲ ಎಂ.ಆರ್.ಹಿರೇಮಠದ್ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ.ಜಿ.ಎಸ್.ಯತೀಶ್ ವಹಿಸಲಿದ್ದಾರೆ. ಟಿ.ವಿದ್ಯಾಧರ ವೇದವರ್ಮ ಇತರರು ಆಗಮಿಸಲಿದ್ದಾರೆ.

# ಸಿದ್ದಗಂಗಾ ಶ್ರೀ ಡಾ. ಶಿವಕುಮಾರ ಸ್ವಾಮೀಜಿ ವೃತ್ತದ ನಾಮಫಲಕ ಅನಾವರಣ




ದಾವಣಗೆರೆ, ಜ. 10 - ನಗರದ ಕೊಂಡಜ್ಜಿ ರಸ್ತೆಯ ಆರ್‌ಟಿಒ ಆಫೀಸ್ ಹತ್ತಿರದ ಶ್ರೀ ಸಿದ್ದಗಂಗಾ ಡಾ. ಶಿವಕುಮಾರ ಸ್ವಾಮೀಜಿ ವೃತ್ತದ ನಾಮಫಲಕ ಅನಾವರಣವನ್ನು ಮಹಾನಗರ ಪಾಲಿಕೆಯ ಮೇಯರ್ ಕೆ. ಚಮನ್ ಸಾಬ್ ಮತ್ತು ಉಪ ಮೇಯರ್ ಸೋಗಿ ಶಾಂತಕುಮಾರ್ ಅವರು ಇಂದು ನೆರವೇರಿಸಿದರು.

ಈ ಸಂದರ್ಭದಲ್ಲಿ ಸರ್ಕಲ್ ಬಳಗದ ಅಧ್ಯಕ್ಷರಾದ ಶಂಕರ್, ಶಿರೇಕರ್ ಪವರ್ ಮತ್ತು ಬಳಗದ ಗೆಳೆಯರಾದ ಶಿವಕುಮಾರ್, ಜೆ. ಚಂದ್ರಶೇಖರ್, ನರೇಶ್, ಇಟ್ಟಿಗುಡಿ ಆನಂದ್, ರಾಮಚಂದ್ರಪ್ಪ ಹೊಸಮನೆ, ಮುಕುಂದ, ಪರಶುರಾಮ್, ಕಿರಣ ಕುಮಾರ್, ಶಿವಾಚಾರಿ, ನಬಿವುಲ್ಲಾ, ಆನಂದಪ್ಪ, ರೇಣುಕಾ ಫೋಟೋ ಸ್ಟುಡಿಯೋ ವಿನಾಯಕ, ವಿನೋಬ ನಗರ ಸಿದ್ದಗಂಗಾ ಗೆಳೆಯರ ಬಳಗದ ಮಂಜಣ್ಣ, ಶಿವಪ್ರಸಾದ ಕರ್ಜಗಿ ಮತ್ತಿತರರು ಇದ್ದರು.

# ನನ್ನ ರಕ್ಷಣೆಗಾಗಿಯೇ ಪ್ರಾರ್ಥಿಸುವೆ : ಡಿಕೆಶಿ

ಬೆಂಗಳೂರು, ಜ.10- ನನಗೆ ಯಾರ್‍ಯಾರು ತೊಂದರೆ ಕೊಡುತ್ತಾರೆಯೋ ಅವರಿಂದ ರಕ್ಷಣೆ ಸಿಗಲಿ ಎಂಬುದಾಗಿ ಪ್ರಾರ್ಥನೆ ಮಾಡುತ್ತಿರುತ್ತೇನೆ, ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ ಎಂದು ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಇಂದಿಲ್ಲಿ ಪ್ರತಿಕ್ರಿಯಿಸಿದ್ದಾರೆ.

ನೀವು (ಮಾಧ್ಯಮ) ಗಳೂ ನನಗೆ ಬೇಕಾದಷ್ಟು ತೊಂದರೆ ಕೊಡುತ್ತಿರುತ್ತೀರಿ, ಇಲ್ಲದೇ ಇರುವ ಹೊಸ ಸುದ್ದಿಗಳನ್ನು ಸೃಷ್ಟಿ ಮಾಡುತ್ತಾ ಇರುತ್ತೀರಿ, ಅದಕ್ಕಾಗಿ ನಿಮ್ಮಿಂದಲೂ ನಮಗೆ ರಕ್ಷಣೆ ಸಿಗಲಿ ಎಂದು ಪ್ರಾರ್ಥನೆ ಮಾಡುತ್ತಿರುತ್ತೇನೆ. ಶತ್ರುಗಳ ನಾಶಕ್ಕೆ ಶಿವಕುಮಾರ್ ಹೋಮ ಮಾಡಿಸಿದ್ದಾರೆಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ, ನಾನು ಪ್ರತಿ ದಿನವೂ ನನಗೆ ಒಳ್ಳೆಯದಾಗಲಿ ಎಂದೇ ಪೂಜೆ ಮಾಡುತ್ತೇನೆ ಎಂದು ಹೇಳಿದರು.

ವೈಕುಂಠ ಏಕಾದಶಿ ಪ್ರಯುಕ್ತ ವೆಂಕಟೇಶ್ವರ ದೇವರ ದರ್ಶನದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ರಕ್ಷಣೆ, ಮನಸ್ಸಿನ ನೆಮ್ಮದಿ, ಸಮಾಧಾನಕ್ಕಾಗಿ ಹೋಮ ಮಾಡಿಸಿದ್ದೇನೆ, ಪ್ರತಿದಿನವೂ ಪೂಜೆ, ಹೋಮ, ದೇವರ ದರ್ಶನ ಮಾಡುವ ವ್ಯಕ್ತಿ ನಾನು. ನಾನು ದೇವರ ಮೇಲೆ ನಂಬಿಕೆ ಇಟ್ಟಿರುವ ವ್ಯಕ್ತಿ. ನನಗೆ ಧರ್ಮ, ದೇವರು, ಆಚರಣೆಗಳ ಮೇಲೆ ನಂಬಿಕೆಯಿದೆ. ಪ್ರತಿದಿನ ದೇವರಿಗೆ ನಮಸ್ಕಾರ ಮಾಡದೇ ಮನೆಯಿಂದ ಹೊರಗೆ ಬರುವುದಿಲ್ಲ, ನಾನು ಯಾವ ಶಕ್ತಿಯನ್ನು ನಂಬುತ್ತೇನೆಯೋ ಅದರ ಮೇಲೆ ಭಕ್ತಿ, ಪ್ರೀತಿ ಇದ್ದೇ ಇರುತ್ತದೆ ಎಂದರು.

# ನಗರದಲ್ಲಿ ನಾಳೆ ಅದಿತಿ, ಪ್ರತಿಭಾ ಪುರಸ್ಕಾರ

ದಾವಣಗೆರೆ, ಜ. 10 - ಅದಿತಿ ಎಜುಕೇಷನಲ್ ಟ್ರಸ್ಟ್ ನ ಸೈನ್ಸ್ ಅಕಾಡೆಮಿ ಪದವಿ ಪೂರ್ವ ಕಾಲೇಜಿನಿಂದ ಅದಿತಿ - 2024-25 ವಾರ್ಷಿಕೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭವನ್ನು ನಾಡಿದ್ದು ದಿನಾಂಕ 12 ರ ಭಾನುವಾರ ಬೆಳಿಗ್ಗೆ 10.30ಕ್ಕೆ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಸ್ಫೂರ್ತಿ ಎಜುಕೇಷನಲ್ ಟ್ರಸ್ಟ್, ದವನ್ ಕಾಲೇಜಿನ ಕಾರ್ಯದರ್ಶಿ ವೀರೇಶ್ ಪಟೇಲ್, ವಿಜಯ ಕರ್ನಾಟಕ ದಿನ ಪತ್ರಿಕೆಯ ಸ್ಥಾನಿಕ ಸಂಪಾದಕ ಸದಾನಂದ ಹೆಗಡೆ ಆಗಮಿಸಲಿದ್ದಾರೆ. ಕಾಲೇಜಿನ ಪ್ರಾಂಶುಪಾಲ ಜಿ. ವಿರೂಪಾಕ್ಷಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಮಾರಂಭದಲ್ಲಿ ಕಾಲೇಜಿನ ಹಳೆಯ ಸಾಧಕ ವಿದ್ಯಾರ್ಥಿಗಳಾದ, ಚಿಕ್ಕಬಳ್ಳಾಪುರ ಹಾಲು ಉತ್ಪನ್ನ ಒಕ್ಕೂಟದ ಸಹಾಯಕ ಪ್ರಬಂಧಕ ಡಾ. ಜಿ. ಸುನೀಲ್ ನಾಯ್ಡು, ಸರ್ಕಾರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಡಾ. ಎಂ.ಪಿ. ಮುರುಗೇಶ್ ಹಾಗೂ ಎಂ.ಡಿ. ಮಾಡುತ್ತಿರುವ ಡಾ. ಚಂದನ್ ಜಿ.ನಾಯ್ಕ್ ಅವರುಗಳಿಗೆ 'ಗೌರವ ಪುರಸ್ಕಾರ' ನೀಡಲಾಗುತ್ತದೆ.

2023-24ನೇ ಸಾಲಿನ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಕಾಲೇಜಿಗೆ ಕೀರ್ತಿ ತಂದ 125ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ, ವಿವಿಧ ವಿಷಯಗಳಲ್ಲಿ 100ಕ್ಕೆ 100 ಅಂಕ ಪಡೆದ ವಿದ್ಯಾರ್ಥಿಗಳನ್ನೂ ಹಾಗೂ ಕ್ರೀಡೆಯಲ್ಲಿ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅವರ ಪೋಷಕರೊಂದಿಗೆ ಸನ್ಮಾನಿಸಿ, ಗೌರವಿಸಲಾಗುತ್ತದೆ.

ಸಂಸ್ಥೆಯ ನಿರ್ದೇಶಕರೂ ಹಾಗೂ ದಾವಣಗೆರೆ ಮಹಾನಗರ ಪಾಲಿಕೆಯ ನಿಕಟಪೂರ್ವ ಮೇಯರ್ ಎಸ್. ಟಿ. ವೀರೇಶ್, ಸಂಸ್ಥೆಯ ಅಧ್ಯಕ್ಷ ಎ.ಹೆಚ್. ಶಶಿಕಿರಣ್, ಸಂಸ್ಥೆಯ ಕಾರ್ಯದರ್ಶಿ ವೈ.ವಿ. ವಿನಯ್, ಸಂಸ್ಥೆಯ ಉಪಾಧ್ಯಕ್ಷ ಕೆ. ರಘು ಅವರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

# ಹರಿಹರ ವಿಠ್ಠಲ ರುಕ್ಮಿಣಿ ದೇವಸ್ಥಾನದಲ್ಲಿ ಏಕಾದಶಿ ವಿಶೇಷ ಪೂಜೆ

## ಯುವ ಪೀಳಿಗೆಗೆ ಸಂಸ್ಕಾರ, ಸಂಸ್ಕೃತಿ ತಿಳಿಸಬೇಕು : ಶಂಕರ್ ಖಟಾವ್ಕರ್



ಹರಿಹರ, ಜ.10- ಹಿರಿಯರು, ಧಾರ್ಮಿಕ ಗುರುಗಳು, ಶರಣರು ಮತ್ತು ಸಂತರು ಹೇಳಿ ಕೊಟ್ಟ ಸಂಪ್ರದಾಯ ಹಾಗೂ ಪರಂಪರೆಯನ್ನು ಮುಂದುವರೆಸಿ ಕೊಂಡು ಹೋದಾಗ ಮಾತ್ರ ಮುಂದಿನ ಯುವ ಪೀಳಿಗೆಗೆ ಸಂಸ್ಕಾರ, ಸಂಸ್ಕೃತಿ ಮತ್ತು ಆಚಾರ- ವಿಚಾರಗಳನ್ನು ತಿಳಿಯಲು ಸಹಕಾರಿಯಾಗುತ್ತದೆ ಎಂದು ವಿಠ್ಠಲ ರುಕ್ಮಿಣಿ ದೇವಸ್ಥಾನ ಸಮಿತಿಯ ಅಧ್ಯಕ್ಷರೂ ಆದ ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಹೇಳಿದರು.

ನಗರದ ನಾಮದೇವ ಶಿಂಪಿ ಕಲ್ಯಾಣ ಮಂಟಪದ ಆವರಣದಲ್ಲಿರುವ ಶ್ರೀ ವಿಠ್ಠಲ ರುಕ್ಮಿಣಿ ದೇವರಿಗೆ ವೈಕುಂಠ ಏಕಾದಶಿ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ರುದ್ರಾಭಿಷೇಕ, ವಿಷ್ಣು ಸಹಸ್ರನಾಮ ಪಾರಾಯಣ, ತುಳಸಿ ಅರ್ಚನೆ ಸೇರಿದಂತೆ, ವಿವಿಧ ಪೂಜಾ ಕಾರ್ಯಕ್ರಮಗಳ ನಂತರ ಅವರು ಮಾತನಾಡಿದರು.

ನಾಡಿನ ಜನರು ಸಮೃದ್ಧ ಜೀವನ ನಡೆಸುವುದಕ್ಕೆ ನಮ್ಮ ದಾರ್ಶನಿಕರು, ಸಂತರು ತಿಳಿಸಿರುವ ಧರ್ಮದ ಆಚಾರ-ವಿಚಾರಗಳನ್ನು ಉಳಿಸಿ ಬೆಳೆಸಬೇಕಾಗಿದೆ.

ಅಲ್ಲದೇ ಮುಂದಿನ ಪೀಳಿಗೆಯ ಅನುಕೂಲದ ದೃಷ್ಟಿಯಿಂದ ಆಚರಣೆ ಮಾಡುವುದು ಮತ್ತು ಅದನ್ನು ಉಳಿಸಿಕೊಂಡು ಹೋಗುವಂತದ್ದು ಎಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಜಿತ್ ಸಾವಂತ್, ನಾಗಮಣಿ ಶಾಸ್ತ್ರೀ, ಶಿವಪ್ರಕಾಶ್ ಶಾಸ್ತ್ರೀ, ಬಸವರಾಜ್ ಪಾಟೇಲ್, ಸುಭಾಷ್ ಬೊಂಗಾಳೆ, ಅಂಬಾಸಾ ಹಂಸಾಗರ್, ಶ್ರೀನಿವಾಸ ಮೆಹರ್ವಾಡೆ, ಶಿವಪ್ರಕಾಶ್ ಶ್ರೇಷ್ಠಿ, ರಾಜು ಕಿರೋಜಿ, ನಗರಸಭೆ ಸದಸ್ಯೆ ನಾಗರತ್ನ, ಅಂಜನಾ ಖಟಾವ್ಕಾರ್, ಸುರೇಖಾ ಅರುಣ್ ಬೊಂಗಾಳೆ, ಮುಕ್ತಾ ಬೊಂಗಾಳೆ, ಅರುಣಾ, ಮಂಜುಳಾ, ರೂಪಾ, ಸಾಕಮ್ಮ ನಿರ್ಮಲ ದುರುಗೋಜಿ, ಶೋಭಾ, ರತ್ನ ಮಹೇಂದ್ರಕರ್ ಇತರರು ಹಾಜರಿದ್ದರು.

## ರಾಣೇಬೆನ್ನೂರಿನಲ್ಲಿ ಇಂದು ರೇನ್ಬೋ ಶಾಲಾ ವಾರ್ಷಿಕೋತ್ಸವ

ರಾಣೇಬೆನ್ನೂರು ಕಮದೋಡ ಗ್ರಾಮದ ಬಳಿ ಇರುವ ರೇನ್ಬೋ ರೆಸಿಡೆನ್ಸಿಯಲ್ ಪಬ್ಲಿಕ್ ಸ್ಕೂಲ್‌ನ 18ನೇ ವಾರ್ಷಿಕೋತ್ಸವ ಇಂದು ನಡೆಯಲಿದೆ. ನಿವೃತ್ತ ಪ್ರಾಚಾರ್ಯ ಎನ್. ಕಟ್ಟಿಮನಿ ಅಧ್ಯಕ್ಷತೆ ವಹಿಸುವರು. ಪರಿಶಿಷ್ಟ ವರ್ಗದ ಕಲ್ಯಾಣಾಧಿಕಾರಿ ಮಂಜಾನಾಯ್ಕ, ಬಿಇಓ ಶಾಮಸುಂದರ ಅಡಿಗ, ಸಂಸ್ಥಾಪಕ ಸಿ.ಟಿ. ಸುರೇಶ, ಲಲಿತಾ ಸುರೇಶ, ಎಸ್.ಕೆ. ನಾಗರಾಜ ಭಾಗವಹಿಸುವರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಹಾಗೂ ವಿದ್ಯಾರ್ಥಿಗಳ ಮನರಂಜನೆ ಕಾರ್ಯಕ್ರಮಗಳು ನಡೆಯಲಿವೆ.

## ಪಿಯು, ಎಸ್ಸೆಸ್ಸೆಲ್ಸಿ ಪರೀಕ್ಷೆ

(1ನೇ ಪುಟದಿಂದ) ವಿಷಯಗಳು.

ದ್ವಿತೀಯ ಪಿಯು ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 1–ಕನ್ನಡ, ಅರೇಬಿಕ್, 3–ಗಣಿತ, ಶಿಕ್ಷಣಶಾಸ್ತ್ರ, ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, 4–ತೆಲುಗು, ತಮಿಳು, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಲೆಯಾಳ, 5–ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, 7–ಇತಿಹಾಸ, ಭೌತಶಾಸ್ತ್ರ, 10–ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭ ಶಾಸ್ತ್ರ, ಗೃಹ ವಿಜ್ಞಾನ, 12–ಮನಃಶಾಸ್ತ್ರ, ರಸಾಯನವಿಜ್ಞಾನ, ಮೂಲಗಣಿತ, 13–ಅರ್ಥಶಾಸ್ತ್ರ, 15–ಇಂಗ್ಲಿಷ್, 17–ಭೂಗೋಳ ಶಾಸ್ತ್ರ, 18– ಜೀವಶಾಸ್ತ್ರ, ಸಮಾಜಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ, 19–ಹಿಂದೂಸ್ತಾನಿ ಸಂಗೀತ, ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್, 20–ಹಿಂದಿ.

## ಆಶಾ ಕಾರ್ಯಕರ್ತೆಯರಿಗೆ 10 ಸಾವಿರ

(1ನೇ ಪುಟದಿಂದ) ಪೊಲೀಸರು ಬರುತ್ತಾರೆ. ನಕ್ಸಲ್‌ವಾದ ರಾಜ್ಯದಲ್ಲಿ ಇರಬಾರದು ಎಂಬುದು ನಮ್ಮ ಉದ್ದೇಶ. ಯಾವುದೇ ಹೋರಾಟ ಶಾಂತಿಯುತವಾಗಿರಬೇಕು. ಶಸ್ತ್ರಾಸ್ತ್ರ ಹೋರಾಟ ನಡೆಯಬಾರದು. ಅನ್ಯಾಯ, ಶೋಷಣೆಗಳ ವಿರುದ್ಧ ಪ್ರತಿಭಟಿಸಲು ಎಲ್ಲರಿಗೂ ಹಕ್ಕಿದೆ ಎಂದು ಹೇಳಿದರು. ಶೃಂಗೇರಿಯಲ್ಲಿ ಇನ್ನೊಬ್ಬ ನಕ್ಸಲ್ ಇದ್ದಾನೋ ಇಲ್ಲವೋ ನಮಗೆ ಗೊತ್ತಿಲ್ಲ. ಅವನಿಗೆ ನಾನು ಮುಖ್ಯ ವಾಹಿನಿಗೆ ಮನವಿ ಮಾಡುವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.


**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 40x70 ಪೂರ್ವ, ಜೈನ್ ಸ್ಕೂಲ್ ಹಿಂಭಾಗದಲ್ಲಿ 30x55 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ, 35x50 ಉತ್ತರ-ಪಶ್ಚಿಮ ಕಾರ್ನರ್, 40x70 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ತಕ್ಷಣ ಬೇಕಾಗಿದ್ದಾರೆ**
Petrol Bunk ನಲ್ಲಿ ಕೆಲಸ ಮಾಡಲು Day & Night Shift ನಲ್ಲಿ ಅನುಭವವುಳ್ಳವರು ಮತ್ತು ಹೊಸದಾಗಿ ಸೇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
94807 77338, 91648 98621

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಮನೆ ಬಾಡಿಗೆಗೆ ಇದೆ**
2 BHK, ಸೋಲಾರ್, ಅಟ್ಯಾಚ್ಡ್ ಬಾತ್ ರೂಂ ಇರುವ ಮನೆ ಆವರಗೆರೆ ಆರ್.ಬಿ. ಬಡಾವಣೆಯಲ್ಲಿ ಹೊಂಡೈ ಶೋರೂಂ ಹಿಂಭಾಗ ಬಾಡಿಗೆಗೆ ಇದೆ.
ಮೊ: 80882 92977

**ಬೇಕಾಗಿದ್ದಾರೆ**
ರಾತ್ರಿ ಶಿಫ್ಟ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ
ಖುದ್ದಾಗಿ ಜನತಾವಾಣಿ ಕಚೇರಿಯನ್ನು ಬೆಳಿಗ್ಗೆ 12 ರಿಂದ ಸಂಜೆ 5 ಗಂಟೆಯ ಒಳಗೆ ಸಂಪರ್ಕಿಸಿ

**ಬೇಕಾಗಿದ್ದಾರೆ**
B.Com ಅಥವಾ BA ಆದವರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
96325 54524
(Call after 10 am)

**ಮಾರಾಟಕ್ಕಿದೆ**
ಸುಸಜ್ಜಿತವಾದ ಸ್ಕಿನ್ ಅಂಡ್ ಹೇರ್ ಕೇರ್ ಕ್ಲಿನಿಕ್, ಫ್ಯಾಟ್‌ನೆಸ್ ಕಡಿಮೆ ಮಾಡುವ ವೆಲ್‌ನೆಸ್ ಸೆಂಟರ್, ಕಾಸ್ಮೆಟಾಲಜಿ ಸೆಂಟರ್ ಮಾರಾಟಕ್ಕಿದೆ
76192 57443

**ಮನೆ ಬಾಡಿಗೆಗೆ ಇದೆ**
#1946/18 ಶ್ರೀ ಶೈಲ ಮಲ್ಲಿಕಾರ್ಜುನ ನಿಲಯ, 5ನೇ ಮೇನ್, 16ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ. 1ನೇ ಮಹಡಿಯಲ್ಲಿ ಮೂರು ಬೆಡ್ ರೂಂ ಇರುವ ಮನೆ ಬಾಡಿಗೆಗೆ ಇದೆ.
9880625700, 9480243601

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**Receptionist Wanted**
1. Fluent in Kannada, English and Hindi
2. Should be well versed in MS Office
3. Good written and verbal communication skills
88842 40410

**ಸೈಟ್ ಮಾರಾಟಕ್ಕಿದೆ**
ಹಳೆ ಕುಂದುವಾಡದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿಂಭಾಗ, ಪೂರ್ವಾಭಿಮುಖ ಕಾರ್ನರ್ ಸೈಟ್ # 4081/34, ಅಳತೆ : 40x50
97400 96577

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಮನೆ ಲೀಸ್‌ಗೆ ಇದೆ**
2BHK 2ನೇ ಮಹಡಿ ಮನೆ, ಲೀಸ್ ಮೊತ್ತ 5 ಲಕ್ಷ, ದೇವರಾಜ ಅರಸ್ ಬಡಾವಣೆ 'ಎ' ಬ್ಲಾಕ್, 2ನೇ ಮೇನ್, 2ನೇ ಕ್ರಾಸ್, ದಾವಣಗೆರೆ. ಬೋರ್ ವೆಲ್/ ಕಾರ್ಪೊರೇಷನ್ ನೀರಿನ ವ್ಯವಸ್ಥೆ ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ.
7349397287, 9741746205

**WANTED**
- Office work -1
- Sales work -1
A B Distributors
Ashoka Road, Davangere
90608 83886, 99640 10199

**For Rent**
5000 AND 16,000 SQFT Open Godown at P.B. Road, Behind sub Register office with water, Power, office room and full Compound wall.
94481 78127

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**WANTED**
Lady receptionist knowing good english, english typing skills & computer knowledge at
SHEETAL DIAGNOSTIC CENTRE
P.J.Extension, 7th Cross, Near Byadgi Shetru School, Davanagere.
Contact with resume.
94485 90794, 96263 44451

**ಮನೆ ಬಾಡಿಗೆಗೆ ಇದೆ**
ಬೋರ್ ಮತ್ತು ನಲ್ಲಿ ನೀರಿನ ಸೌಕರ್ಯವಿರುವ 2 ಬೆಡ್ ರೂಂವುಳ್ಳ ಸುಸಜ್ಜಿತವಾದ ಮೊದಲನೇ ಮಹಡಿಯಲ್ಲಿರುವ ಮನೆ ಬಾಡಿಗೆಗೆ ಇದೆ. "ಈರಮ್ಮ ನಿಲಯ" MCC 'A' ಬ್ಲಾಕ್, 4ನೇ ಮುಖ್ಯರಸ್ತೆ, ಹಳೇ ಗುರು ಸ್ಕ್ಯಾನಿಂಗ್ ಪಕ್ಕ, ದಾವಣಗೆರೆ. ವಿಚಾರಿಸಿ
98868 25228
98866 53398

**ಮನೆ ಬಾಡಿಗೆಗೆ ಇದೆ**
DCM ಟೌನ್ ಶಿಪ್, 'ಎ' ಬ್ಲಾಕ್, 1ನೇ ಮೇನ್, 2ನೇ ಕ್ರಾಸ್‌ನಲ್ಲಿ 1ನೇ ಮಹಡಿಯಲ್ಲಿ 3 ಬೆಡ್ ರೂಂ ಬೋರ್ ವೆಲ್/ ಕಾರ್ಪೊರೇಷನ್ ನೀರಿನ ವ್ಯವಸ್ಥೆ ಇರುವ ಮನೆ ಬಾಡಿಗೆಗಿದೆ.
8867233324, 97416 82662

**For Rent**
1st floor, 800 sqft Office Space at P.B. Road, Near Aruna Circle, Opp. G.N. Choultry, Amaron Batteries with all Facilities
94481 78127

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಫೋಟೋಶಾಪ್‌ನಲ್ಲಿ ಅನುಭವವಿರುವ ಕಂಪ್ಯೂಟರ್ ಆಪರೇಟರ್ ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ
8123076505
9113634113

**ಹೋಟೆಲ್ ಫುಡ್ಡೀಸ್**
ಪಾರ್ಟ್ ಟೈಂ / ಫುಲ್ ಟೈಂ ವೈಟರ್‌ಗಳು, ಸ್ಟೀವರ್ಡ್ ಬೇಕಾಗಿದ್ದಾರೆ
ಚರ್ಚ್ ರೋಡ್, ತೊಗಟವೀರ ಕಲ್ಯಾಣ ಮಂಟಪದ ಹತ್ತಿರ, ದಾವಣಗೆರೆ-4.
98861 56688

**Site for Sale**
40x78 east facing in banashankari layout, 30x100 north facing old home for sale in PJ extension, 30x44 north facing site opp SP office, 30x40 south facing, vijay nagar Layout, 10X10 sqft shop for rent.
98805 73887

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್, ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್, ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್, ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ಅಡಿಕೆ ತೋಟ ಮಾರಾಟಕ್ಕಿದೆ**
ರೈಲ್ವೆ ಸ್ಟೇಷನ್, ಹನುಮನಹಳ್ಳಿ
ಸರ್ವೆ ನಂ. 47/6-2 1/2 ಎಕರೆ
ಸರ್ವೆ ನಂ. 47/7-1 1/2 ಎಕರೆ
91484 10257
94497 47164

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**REQUIRED**
Experienced, Accountant having Tally and GST knowledge are required to work in Office.
REDDY ASSOCIATIES
# 82/19,P B Road, Beside Wellness Stores, Opp: Renuka Manidar, Davangere.
99000 22030

# ವೈದ್ಯರ ಭರವಸೆಯೇ ರೋಗ ನಿವಾರಣೆಗೆ ಹೆಚ್ಚು ಕೆಲಸ ಮಾಡುತ್ತದೆ

## ಬಾಪೂಜಿ ಮಕ್ಕಳ ಆಸ್ಪತ್ರೆಯ ವಿವೇಕ್ ಪಾಲಕರ ಕಾರ್ಯಾಗಾರದಲ್ಲಿ ಹಿರಿಯ ವಾಗ್ಮಿ ಎಚ್.ಬಿ.ಮಂಜುನಾಥ



ದಾವಣಗೆರೆ, ಜ.10- ವೈದ್ಯರಲ್ಲೂ ಹಾಸ್ಯ ಪ್ರಜ್ಞೆ ಬೇಕು. ವೈದ್ಯರು ನೀಡುವ ಔಷಧಕ್ಕಿಂತ ಅವರ ಭರವಸೆಯ ಮಾತುಗಳೇ ರೋಗ ನಿವಾರಣೆಯಲ್ಲಿ ಹೆಚ್ಚು ಕೆಲಸ ಮಾಡಲಿವೆ ಎಂದು ಹಿರಿಯ ವಾಗ್ಮಿ ಹೆಚ್.ಬಿ. ಮಂಜುನಾಥ್ ಹೇಳಿದರು.

ನಗರದ ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ ವಿವೇಕ್ ಆರೋಗ್ಯ ಕಾರ್ಯಾಗಾರದಲ್ಲಿ ಹಾಸ್ಯ ಮತ್ತು ಆರೋಗ್ಯ ವಿಷಯ ಕುರಿತು ಅವರು ಉಪನ್ಯಾಸ ನೀಡುತ್ತಿದ್ದರು.

ವೈದ್ಯಕೀಯ ಕ್ಷೇತ್ರದಲ್ಲಿ ನಗುವೂ ಒಂದು ದಿವ್ಯೌಷಧವಾಗಿದೆ. ಇದು ನಮ್ಮ ಅನೇಕ ಶಾರೀರಿಕ ಹಾಗೂ ಮಾನಸಿಕ ಕಾಯಿಲೆಗಳನ್ನು ದೂರ ಮಾಡಲಿದೆ ಎಂದು ಹೇಳಿದರು.

ನಗುವು ಮುಖದ ಎಲ್ಲ ಸ್ನಾಯುಗಳಿಗೂ ಉತ್ತಮ ವ್ಯಾಯಾಮವಾಗಿದೆ. ಹಾಸ್ಯದಿಂದ ಮನಸ್ಸು ಮುದಗೊಂಡಾಗ ದೇಹದಲ್ಲಿ ಉತ್ಪತ್ತಿಯಾಗುವ ಎಂಡಾರ್ಫಿನ್ ಗ್ರಂಥಿಯು ಅನೇಕ ಕಾಯಿಲೆಗಳನ್ನು ದೂರ ಮಾಡಬಲ್ಲದು ಎಂದರು.

ಜೀವನೋತ್ಸಾಹಕ್ಕೆ ಅವಶ್ಯವಾದ ಹಾಸ್ಯವು ಅನ್ಯರ ಲೇವಡಿ, ಟೀಕೆಗೆ ಮೀಸಲಾಗಬಾರದು. ಅದು ಆತ್ಮ ವಿಮರ್ಶೆಗೂ ಸಾಧನವಾದಾಗ ಸದಭಿರುಚಿಯ ಹಾಸ್ಯವಾಗಲಿದೆ. ಬಹುತೇಕ ಪ್ರಸಿದ್ಧ ಹಾಸ್ಯ ಪ್ರಸ್ತುತಿಗಾರರು, ಹರಟೆಗಾರರು ಕಳಪೆ ಹಾಸ್ಯದಿಂದಲೇ ಜನರಂಜನೆ ನೀಡುತ್ತಿರುವುದು ವಿಷಾದನೀಯ ಎಂದರು.

ಹಾಸ್ಯವು ದಡ್ಡತನದಲ್ಲೂ, ಬುದ್ಧಿವಂತಿಕೆಯ ಪರಮಾಧಿಯಲ್ಲೂ ಸೃಷ್ಟಿಯಾಗುತ್ತದೆ. ಬುದ್ಧಿವಂತಿಕೆ ಹಾಸ್ಯಗಳು ನಮ್ಮ ಬದುಕಿನ ಸವಾಲುಗಳಿಗೆ ಪರಿಹಾರದಂತೆಯೂ ಉಪಯುಕ್ತವಾಗಲಿವೆ ಎಂದು ಮಂಜುನಾಥ್ ಹೇಳಿದರು.

ಇದೇ ವೇಳೆ ಹಿರಿಯ ವೈದ್ಯರಾದ ದಿ. ಡಾ. ನಿರ್ಮಲ ಕೇಸರಿ ಅವರ 9ನೇ ಪುಣ್ಯಸ್ಮರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಬಾಪೂಜಿ ಮಕ್ಕಳ ಆಸ್ಪತ್ರೆಯ ನಿರ್ದೇಶಕ ಡಾ. ಗುರುಪ್ರಸಾದ್, ವ್ಯವಸ್ಥಾಪಕ ಸಿದ್ದೇಶ್ವರ ಗುಬ್ಬಿ, ಹಿರಿಯ ಮಕ್ಕಳ ತಜ್ಞ ಡಾ. ಸುರೇಶ್ ಬಾಬು, ಡಾ. ಕೌಜಲಗಿ, ಡಾ. ಎಸ್.ಎಸ್. ಪ್ರಕಾಶ್, ಡಾ. ಮಧು ಪೂಜಾರ್, ಡಾ. ರಮೇಶ್ ಹಾಗೂ ಇತರರು ಉಪಸ್ಥಿತರಿದ್ದರು.

## ಎಸ್ಸೆಸ್‌ಗೆ ಹೆಬ್ಬಾಳು ಶ್ರೀಗಳಿಂದ ಗುರುರಕ್ಷೆ



ಬೆಂಗಳೂರು, ಜ. 10 - ಹಿರಿಯ ಶಾಸಕರಾದ ಶಾಮನೂರು ಶಿವಶಂಕರಪ್ಪ ಅವರನ್ನು ಇಲ್ಲಿನ ಅವರ ನಿವಾಸದಲ್ಲಿ ಹೆಬ್ಬಾಳು ಶ್ರೀ ರುದ್ರೇಶ್ವರ ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಇಂದು ಭೇಟಿ ಮಾಡಿ, ಗುರುರಕ್ಷೆ ನೀಡಿದರು.

## ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದಿಂದ ಎಸ್ಸೆಸ್ ಭೇಟಿ




ಬೆಂಗಳೂರು, ಜ. 10 - ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕದಿಂದ ಶಾಮನೂರು ಶಿವಶಂಕರಪ್ಪ ಅವರನ್ನು ಇಲ್ಲಿನ ಅವರ ನಿವಾಸದಲ್ಲಿ ಇಂದು ಭೇಟಿ ಮಾಡಿ ಯೋಗಕ್ಷೇಮ ವಿಚಾರಿಸಲಾಯಿತು. ಮಹಾಸಭಾ ಜಿಲ್ಲಾಧ್ಯಕ್ಷ ಐಗೂರು ಚಂದ್ರಶೇಖರ್, ರಾಷ್ಟ್ರೀಯ ಉಪಾಧ್ಯಕ್ಷ ಅಣಬೇರು ರಾಜಣ್ಣ, ಜಿಲ್ಲಾ ಗೌರವ ಅಧ್ಯಕ್ಷ ಎಸ್.ಜಿ. ಉಳವಯ್ಯ, ಪ್ರಧಾನ ಕಾರ್ಯದರ್ಶಿ ಅವಿನಾಶ್ ಬಸವರಾಜ್, ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ಕೊರಟಕೆರೆ ಶಿವಕುಮಾರ್ ಇದ್ದರು.

## ಎಸ್ಸೆಸ್ ಭೇಟಿ ಮಾಡಿದ ಬಿ.ಸಿ. ಪಾಟೀಲ್



ಬೆಂಗಳೂರು, ಜ. 10 - ಎಸ್ಸೆಸ್ ಅವರನ್ನು ಮಾಜಿ ಸಚಿವ ಬಿ.ಸಿ. ಪಾಟೀಲ್ ಅವರು ಇಂದು ಭೇಟಿ ಮಾಡಿ ಯೋಗಕ್ಷೇಮ ವಿಚಾರಿಸಿದರು.

## ಕೆ.ಎಂ. ಸುರೇಶ್‌ರಿಂದ ಎಸ್ಸೆಸ್ ಭೇಟಿ



ಬೆಂಗಳೂರು, ಜ. 10 - ಶಾಮನೂರು ಶಿವಶಂಕರಪ್ಪ ಅವರನ್ನು ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಶ್ರೀ ಸೋಮೇಶ್ವರ ವಿದ್ಯಾಲಯದ ಗೌರವ ಕಾರ್ಯದರ್ಶಿ ಕೆ.ಎಂ. ಸುರೇಶ್, ಬಿಜೆಪಿ ಮುಖಂಡ ಹೆಚ್.ಎನ್. ಕಲ್ಲೇಶ್, ನಟರಾಜ್ ಇಂದು ಭೇಟಿ ಮಾಡಿ ಕುಶಲೋಪರಿ ವಿಚಾರಿಸಿದರು.

## ನಗರದ ದೇವರಾಜ ಅರಸು ಬಡಾವಣೆಯಲ್ಲಿ ಇಂದು - ನಾಳೆ ನಿತ್ಯೋತ್ಸವ ಕಾರ್ಯಕ್ರಮ

ಶ್ರೀ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಹಿಂಭಾಗದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಉದ್ಯಾನವನದ ಬಳಿ ಇಂದು ಮತ್ತು ನಾಳೆ ಕನ್ನಡ ನಿತ್ಯೋತ್ಸವ ಕಾರ್ಯಕ್ರಮ ನಡೆಯಲಿದೆ.

ಇಂದು ಸಂಜೆ 6.30ಕ್ಕೆ ನಗರ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಆಶಾ ಉಮೇಶ್ ಅವರ ಅಧ್ಯಕ್ಷತೆಯಲ್ಲಿ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಕಾರ್ಯಕ್ರಮವನ್ನು ಉದ್ಘಾಟಿಸುವರು.

ಶ್ರೀಮತಿ ನಾಗರತ್ನ ಮಲ್ಲೇಶಪ್ಪ, ಶ್ರೀಮತಿ ನಾಗರತ್ನ ಕೃಷ್ಣ, ಶ್ರೀಮತಿ ಇ.ಎಂ. ಶಕುಂತಲ, ಶ್ರೀಮತಿ ತ್ರಿವೇಣಿ ಬೊಮ್ಮ ತಿಪ್ಪೇಶ್, ಶ್ರೀಮತಿ ನಜ್ಮಾ ಬಾನು, ಶ್ರೀಮತಿ ಲಲಿತಮ್ಮ ದುಗ್ಗಪ್ಪ, ಶ್ರೀಮತಿ ಅನಿತಾ ಸಾಯಿನಾಥ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

## ನಗರದಲ್ಲಿ ಇಂದು ಲಯನ್ಸ್ ಪ್ರಾಂತೀಯ ಸಮ್ಮೇಳನ



ಅಂತರರಾಷ್ಟ್ರೀಯ ಸಾಮಾಜಿಕ ಸೇವಾ ಸಂಸ್ಥೆ ಲಯನ್ಸ್ ಜಿಲ್ಲೆ 317 - ಸಿ ಪ್ರಾಂತ 9ರ ಪ್ರಾಂತೀಯ ಸಮ್ಮೇಳನವು ರಾಷ್ಟ್ರೀಯ ಹೆದ್ದಾರಿ ಕುಂದುವಾಡ ಕೆರೆ ಹತ್ತಿರದ ಸುಶಿ ಕನ್ವೆನ್ಷನ್ ಸೆಂಟರ್‌ನಲ್ಲಿ ಇಂದು ನಡೆಯಲಿದೆ.

ಸಾಮಾಜಿಕ ಕಳಕಳಿಯ ಉದ್ಯಮಿ ವೈ.ಬಿ. ಸತೀಶ್ ಲಯನ್ಸ್ ಪ್ರಾಂತೀಯ ಅಧ್ಯಕ್ಷರಾಗಿದ್ದು, ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿರುವ ಈ ಸಮ್ಮೇಳನವನ್ನು ಶ್ರೀಮತಿ ಲಕ್ಷ್ಮಿ ವೈ.ಬಿ. ಸತೀಶ್ ಉದ್ಘಾಟಿಸಲಿದ್ದಾರೆ.

ಲಯನ್ಸ್ ಜಿಲ್ಲೆ 324 ಡಿ1 ಮಾಜಿ ರಾಜ್ಯಪಾಲ ಜಿ. ಶ್ರೀನಿವಾಸ್ ಮತ್ತು ಹೊಸನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಹೆಚ್ಚುವರಿ ಮುಖ್ಯಸ್ಥರಾದ ಡಾ. ಕೆ. ಶ್ರೀಪತಿ ಹಳಗುಂದ ಅವರುಗಳು ಮುಖ್ಯ ಅತಿಥಿಗಳಾಗಿದ್ದಾರೆ. ಲಯನ್ಸ್ ಜಿಲ್ಲೆ 317 ಸಿ ಉಪ ರಾಜ್ಯಪಾಲರುಗಳಾದ ಶ್ರೀಮತಿ ಸಪ್ನ ಸುರೇಶ್ ಮತ್ತು ರಾಜು ಕೋಟ್ಯಾನ್, ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್, ಮಾರ್ಗದರ್ಶಕರಾದ ಆರ್.ಜಿ. ಶ್ರೀನಿವಾಸ್ ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿರುವರು.

ದಾವಣಗೆರೆ ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳವಯ್ಯ, ಕಾರ್ಯದರ್ಶಿ ಸಿ. ಅಜಯ್‌ನಾರಾಯಣ, ಖಜಾಂಚಿ ಎಸ್. ನಾಗರಾಜ್, ಸಹ ಕಾರ್ಯದರ್ಶಿ ಹೆಚ್.ಎಂ. ನಾಗರಾಜ್ ಅವರುಗಳ ನೇತೃತ್ವದ ದಾವಣಗೆರೆ ಲಯನ್ಸ್ ಕ್ಲಬ್ ಈ ಸಮ್ಮೇಳನದ ಆತಿಥ್ಯ ವಹಿಸಿಕೊಂಡಿದೆ.

ಸಮ್ಮೇಳನದ ಸ್ವಾಗತ ಸಮಿತಿ ಛೇರ್ಮನ್ ಎನ್.ವಿ. ಬಂಡಿವಾಡ, ಕಾರ್ಯದರ್ಶಿ ಬೆಳ್ಳೂಡಿ ಶಿವಕುಮಾರ್, ಖಜಾಂಚಿ ಎನ್.ಸಿ. ಬಸವರಾಜ್, ಸಹ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ್ ಅವರುಗಳು ಸಮಾರಂಭದ ನೇತೃತ್ವ ವಹಿಸಿಕೊಂಡಿದ್ದಾರೆ.

## ಗಣಿ ಮಾಲೀಕರ ಸಮಸ್ಯೆಗಳನ್ನು ಆಲಿಸಿದ ಸಚಿವ ಎಸ್ಸೆಸ್ಸೆಂ



ಬೆಂಗಳೂರು, ಜ. 10 - ರಾಜ್ಯದ ಗಣಿ ಮಾಲೀಕರುಗಳೊಂದಿಗೆ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕಾ ಇಲಾಖಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸಭೆ ನಡೆಸಿದರು.

ಗಣಿ ಮಾಲೀಕರುಗಳ ಕುಂದುಕೊರತೆಗಳನ್ನು ಆಲಿಸಿ ಸೂಕ್ತ ಕ್ರಮಕ್ಕೆ ಸೂಚಿಸಿದರು. ಇದೇ ವೇಳೆ ತೋಟಗಾರಿಕಾ, ಅರಣ್ಯ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಲಾಯಿತು. ಈ ಸಂದರ್ಭದಲ್ಲಿ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಇದ್ದರು.

## ದೋಬಿ ಘಾಟ್‌ನ ಯಂತ್ರೋಪಕರಣಗಳ ಪರಿಶೀಲನೆ



ದಾವಣಗೆರೆ, ಜ. 10 - ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ನಗರದ ಮಡಿ ಕಟ್ಟೆಯಲ್ಲಿ (ದೋಬಿ ಘಾಟ್) ಪಾಲಿಕೆ ಅನುದಾನದಲ್ಲಿ ಅಳವಡಿಸಲಾಗುತ್ತಿರುವ ಆಧುನಿಕ ಲಾಂಡ್ರಿ ಯಂತ್ರಗಳ ಡ್ರೈಯರ್ ಮತ್ತು ಇತರೆ ಅವಶ್ಯಕ ಘಟಕಗಳನ್ನು ಅಳವಡಿಸುವ ಕಾಮಗಾರಿಯನ್ನು ನಗರ ಯೋಜನೆ ಹಾಗೂ ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಹುಲ್ಲುಮನೆ ಗಣೇಶ್ ಅವರು ಭೇಟಿ ನೀಡಿ ಪರಿಶೀಲಿಸಿದರು.

ಬಟ್ಟೆಗಳನ್ನು ಶುಚಿಗೊಳಿಸುವ ಕಾಯಕದಲ್ಲಿ ತೊಡಗಿರುವ ನೂರಾರು ಕುಟುಂಬಗಳಿಗೆ ಈ ಯಂತ್ರಗಳ ಅಳವಡಿಕೆಯಿಂದ ಹೆಚ್ಚು ಶ್ರಮವಿಲ್ಲದೆ ವೇಗವಾಗಿ ಬಟ್ಟೆಗಳನ್ನು ಶುಚಿಗೊಳಿಸಬಹುದು. ಈ ಯಂತ್ರಗಳ ಕಾರ್ಯನಿರ್ವಹಣೆಗೆ ಅಗತ್ಯವಿರುವ ವಿದ್ಯುತ್ ಕಾಮಗಾರಿಯನ್ನು ಮತ್ತು ಸಂಬಂಧಿಸಿದ ಇಲಾಖೆಯ ಅನುಮತಿಯನ್ನು ಒಂದು ವಾರದೊಳಗೆ ಪಡೆದು ಕಾರ್ಯಾರಂಭಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಉಪ ಆಯುಕ್ತ (ಅಭಿವೃದ್ಧಿ) ಮಂಜುನಾಥ ಚೌವ್ಹಾಣ್ ಹಾಗೂ ಕಾರ್ಯ ಪಾಲಕ ಅಭಿಯಂತರ (ವಿದ್ಯುತ್) ಉದಯ ಕುಮಾರ್ ಮತ್ತಿತರರು ಹಾಜರಿದ್ದರು.

## ನಗರದ ಪಿಎಸ್‌ಎಸ್‌ಇಎಮ್‌ಆರ್ ಶಾಲೆಯಲ್ಲಿ ಇಂದು ವಾರ್ಷಿಕೋತ್ಸವ

ತೋಳಹುಣಸೆಯ ಶಿವಗಂಗೋತ್ರಿ ಆವರಣದಲ್ಲಿರುವ ಪಿ.ಎಸ್.ಎಸ್.ಇ.. ಎಮ್. ಆರ್. ಶಾಲೆ ಹಾಗೂ ಬಾಪೂಜಿ ಎಸ್.ಪಿ.ಎಸ್.ಎಸ್ ಪಿಯು ಕಾಲೇಜಿನ ವಾರ್ಷಿಕ ಸಾಂಸ್ಕೃತಿಕೋತ್ಸವ ಇಂದು ನಡೆಯಲಿದೆ.


ಸಾಂಸ್ಕೃತಿಕ ಕಾರ್ಯಕ್ರಮದ ಪ್ರಮುಖ ಆಕರ್ಷಣೆ ಧರ್ಮಸಂಸ್ಥಾಪನೆಗಾಗಿ ವಿಷ್ಣುವಿನ ಎಂಟನೇ ಅವತಾರವಾದ ಶ್ರೀ ಕೃಷ್ಣನ ಲೀಲೆಗಳನ್ನು ಬಿಂಬಿಸುವ ಶ್ರೀ ಕೃಷ್ಣ ವೈಭವ ರೂಪಕವನ್ನು ಶಾಲೆಯ ಮಕ್ಕಳು ಅನಾವರಣಗೊಳಿಸಲಿದ್ದಾರೆ.

ದೇಶದ ಸಾಂಸ್ಕೃತಿಕ ವೈವಿಧ್ಯತೆಯನ್ನು ಸಾರುವ ಭರತನಾಟ್ಯ ಮತ್ತು ಜಾನಪದ ಕಲೆಗಳ ವೈಭವಗಳು ಪ್ರದರ್ಶನಗೊಳ್ಳಲಿವೆ.

ಮುಖ್ಯ ಅತಿಥಿಯಾಗಿ ಮಾಹಿತಿ ತಂತ್ರಜ್ಞಾನ ಮತ್ತು ಪ್ರಮುಖ ಡಿಜಿಟಲ್ ಇನ್ಸಟಿಲ್ಸ್ ಸಹಾಯಕ ಕಾರ್ಯದರ್ಶಿ ಮತ್ತು ಸಿ ಬಿ ಎಸ್ ಇ ಕರ್ನಾಟಕ ವಲಯ ಮಾಹಿತಿ ತಂತ್ರಜ್ಞಾನದ ಅಧಿಕಾರಿ ರಾಹುಲ್ ಸಿಂಗ್ ರಾತೋರೆ ಅವರು ಆಗಮಿಸಲಿದ್ದಾರೆ.

ಶಾಲೆಯ ಅಧ್ಯಕ್ಷ ಎಸ್.ಎಸ್. ಗಣೇಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಶಾಲೆಯ ಮುಖ್ಯಸ್ಥರಾದ ಮಂಜುನಾಥ, ರಂಗರಾಜು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

## ಶರಣ ಬಸವೇಶ್ವರರ ಪುರಾಣ ಪ್ರವಚನದಲ್ಲಿ ನಾಳೆ ವಿವಾಹ ಕಾರ್ಯಕ್ರಮ



ದಾವಣಗೆರೆ, ಜ. 10 - ಚೌಕಿಪೇಟೆಯಲ್ಲಿರುವ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ನಡೆಯುತ್ತಿರುವ ಪಂಡಿತ್ ಪುಟ್ಟರಾಜ ಕವಿ ಗವಾಯಿ ವಿರಚಿತ ಕಲಬುರಗಿಯ ಮಹಾದಾಸೋಹಿ ಶರಣ ಬಸವೇಶ್ವರರ ಪುರಾಣ ಕಾರ್ಯಕ್ರಮದಲ್ಲಿ ನಾಡಿದ್ದು ದಿನಾಂಕ 12 ರ ಭಾನುವಾರ ಶ್ರೀ ಶರಣ ಬಸವೇಶ್ವರರ ವಿವಾಹ ಮಹೋತ್ಸವ ನಡೆಯಲಿದೆ.

ಇದೇ ದಿನಾಂಕ 16ರಂದು 25 ತುಲಾಭಾರ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪುರಾಣ ಪ್ರವಚನ ಸಮಿತಿಯ ಅಜ್ಜಂಪುರ ಶೆಟ್ರು ಮೃತ್ಯುಂಜಯ ಅವರು ತಿಳಿಸಿದರು. ಪ್ರತಿದಿನ ಸಂಜೆ 6.30 ರಿಂದ 9 ರವರಗೆ ಪುರಾಣ ಪ್ರವಚನ ನಡೆಯಲಿದೆ.

## ರಾಘವೇಂದ್ರ ಸ್ವಾಮೀಜಿ, ಸೂರುದಾಸ್ ಸ್ವಾಮೀಜಿ ಪುಣ್ಯರಾಧನೆ, ತಿರಕನೂರಿನಲ್ಲಿ ರಂಗ ದಾಸೋಹ



ಶ್ರೀ ರಾಘವೇಂದ್ರ ಸ್ವಾಮಿ



ಶ್ರೀ ಸೂರ್‌ದಾಸ್ ಜೀ

ಕನ್ನಡ ಮತ್ತು ಸಂಸ್ಕೃತ ಇಲಾಖೆ ಸಹಯೋಗದೊಂದಿಗೆ ಶ್ರೀ ರಾಘವೇಂದ್ರ ಸ್ವಾಮೀಜಿ ಮತ್ತು ಶ್ರೀ ಸೂರುದಾಸ್ ಸ್ವಾಮೀಜಿ ಪುಣ್ಯರಾಧನೆ ಹಾಗೂ ತಿರಕನೂರಿನಲ್ಲಿ ರಂಗ ದಾ ಸೋ ಹ ವು ಮಲ್ಲಾಡಿಹಳ್ಳಿ ಶ್ರೀ ಸೂರುದಾಸ್‌ಜಿ ರಂಗಮಂಟಪ ಆಶ್ರಮ ಆವರಣದಲ್ಲಿ ಇಂದು ನಡೆಯಲಿದೆ.

ಇಂದು ಸಂಜೆ 5.30ಕ್ಕೆ ಸಮಾರೋಪ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಹೆಚ್. ಆಂಜನೇಯ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ಸಮಾರೋಪ ಭಾಷಣ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಇನ್‌ಸೈಟ್ ಸಂಸ್ಥೆ ಸಂಸ್ಥಾಪಕ ಬಿ.ಜಿ. ವಿನಯ್ ಕುಮಾರ್, ಬೆಂಗಳೂರು ಎಸ್ಪಿ ವೆಂಕಟೇಶ್ ಪ್ರಸನ್ನ, ಕರ್ನಾಟಕ ಸಮಗ್ರ ಶಿಕ್ಷಣ ಇಲಾಖೆ ಸಹನಿರ್ದೇಶಕ ಎಸ್.ಕೆ. ಪ್ರಸಾದ್, ಜಿ. ದೇವರಾಜು ಕರ್ನಾಟಕ ಶಾಲಾ ಶಿಕ್ಷಕರ ಮತ್ತು ಮೌಲ್ಯ ನಿರ್ಣಯ ಮಂಡಳಿ ಉಪನಿರ್ದೇಶಕ ಜಿ. ದೇವರಾಜು, ಸೇಲ್ಕೋ ಸೋಲಾರ್ ಮುಖ್ಯ ವ್ಯವಸ್ಥಾಪಕ ಮೋಹನ್ ಹೆಗಡೆ, ಎಂ. ನಾಸಿರುದ್ದಿನ್, ಅರಬಗಟ್ಟೆ ಅಣ್ಣಪ್ಪ, ಸುರೇಶ ಕಲಾಪ್ರಿಯ, ಮನೋಹರ ಕೆ.ಎಂ. ಹಾಗೂ ವಿಶ್ವಸ್ತರು ಉಪಸ್ಥಿತರಿರುವರು.

## ಎಸ್ಸೆಸ್‌ಗೆ ಪ್ರಸಾದ ನೀಡಿದ ಶಿವಯೋಗಿಸ್ವಾಮಿ



ಬೆಂಗಳೂರು, ಜ. 10 - ಶಾಮನೂರು ಶಿವಶಂಕರಪ್ಪ ಅವರಿಗೆ ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ ಅವರು ಪಂಚ ಕೇದಾರೇಶ್ವರರ ಶ್ರೀ ಪ್ರಸಾದ ನೀಡಿದರು.

## ಯರಗುಂಟೆಯಲ್ಲಿ ಇಂದು ವಿಕಲಚೇತನರ ನಡೆ ಸರ್ಕಾರಿ ಶಾಲೆಗಳ ಕಡೆ

ಕರ್ನಾಟಕ ರಾಜ್ಯ ವಿಕಲಚೇತನರ ಆರ್.ಪಿ.ಡಿ. ಟಾಸ್ಕ್ ಪೋರ್ಸ್, ಬೆಂಗಳೂರು (ಸಂಘ ಸಂಸ್ಥೆಗಳ ಒಕ್ಕೂಟ) ಜಿಲ್ಲಾ ಘಟಕ ಮತ್ತು ಮಾನಸ ಸಾಧನಾ ವಿಕಲಚೇತನರ ಸೇವಾ ಟ್ರಸ್ಟ್ ವತಿಯಿಂದ ಮಾನಸ ಸಾಧನ-ವಿಕಲಚೇತನರ ನಡೆ ಸರ್ಕಾರಿ ಶಾಲೆಗಳ ಕಡೆ ಹೆಸರಿನಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್ ಬುಕ್, ಲೇಖನ ಸಾಮಗ್ರಿಗಳು ಮತ್ತು ಸಮವಸ್ತ್ರ ವಿತರಣೆ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಗಂಟೆಗೆ ಯರಗುಂಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ವಹಿಸಲಿದ್ದು, ಉದ್ಯಮಿ ಡಿ.ಎಸ್. ಸಿದ್ದಣ್ಣ ಉದ್ಘಾಟನೆ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ತುರ್ಚಘಟ್ಟ ಸಾಧನ ವೃದ್ಧಾಶ್ರಮ ಮತ್ತು ಅನಾಥಾಶ್ರಮದ ಅಧ್ಯಕ್ಷರಾದ ಡಾ. ಪುಷ್ಪಲತಾ, ಮಾತೃದೇವೋ ಸಮಾಜ ಕಲ್ಯಾಣ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಪೋತಲ್ ಶ್ರೀನಿವಾಸ್, ಮುಖ್ಯ ಶಿಕ್ಷಕರಾದ ರುದ್ರಗೌಡ ಗುಬ್ಬಿ, ದೈಹಿಕ ಶಿಕ್ಷಕರಾದ ಎ. ದೇವೇಂದ್ರಪ್ಪ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ಕೊಟ್ಟೂರು : ಭೂ-ದಾಖಲೆ ಡಿಜಿಟಲೀಕರಣಕ್ಕೆ ಚಾಲನೆ



ಕೊಟ್ಟೂರು, ಜ.10- ಭೂ-ಸುರಕ್ಷಾ ಯೋಜನೆ ಅಡಿ ಇಲ್ಲಿನ ತಾಲ್ಲೂಕು ಕಚೇರಿಯ ಭೂ-ದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಕಾರ್ಯಕ್ಕೆ ಹಗರಿಬೊಮ್ಮನಹಳ್ಳಿ ಶಾಸಕ ನೇಮಿರಾಜ ನಾಯ್ಕ ಗುರುವಾರ ವಿಧ್ಯುಕ್ತ ಚಾಲನೆ ನೀಡಿದರು. ಶಿಥಿಲಾವಸ್ಥೆಯಲ್ಲಿರುವ ದಾಖಲೆಗಳನ್ನು ಶಾಶ್ವತವಾಗಿ ಉಳಿಸಲು, ನಕಲಿ ದಾಖಲೆ ಸೃಷ್ಟಿಸಲು ಅವಕಾಶ ಇಲ್ಲದಂತೆ ಸ್ವತಃ ನಾಗರಿಕರೇ ಆನ್‌ಲೈನ್ ಮೂಲಕ ತಮ್ಮ ದಾಖಲೆ ನೋಡಲು ಅನುವು ಮಾಡಿಕೊಡಲು ಈ ಯೋಜನೆ ಸಹಾಯಕವಾಗಲಿದೆ ಎಂದು ಶಾಸಕರು ತಿಳಿಸಿದರು.

ಕರ್ನಾಟಕ ಸರ್ಕಾರ ಆರಂಭಿಸಿರುವ ಈ ಯೋಜನೆ ಮಹತ್ವಾಕಾಂಕ್ಷಿಯಾಗಿದ್ದು, ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪಕ್ಕೆ ಪರಿವರ್ತಿಸಿ, ಸಾರ್ವಜನಿಕರಿಗೆ ಸುಲಭವಾಗಲಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ನಂದಿಪುರ ಪುಣ್ಯ ಕ್ಷೇತ್ರದ ಡಾ. ಮಹೇಶ್ವರ ಶ್ರೀಗಳು, ಸ್ಥಳೀಯ ಜನಪ್ರತಿನಿಧಿಗಳು, ಜಿ.ಪಂ ಮಾಜಿ ಸದಸ್ಯ ಎಂ.ಎಂ.ಜೆ.ಹರ್ಷವರ್ಧನ್, ತಹಶೀಲ್ದಾರ್ ಜಿ.ಕೆ ಅಮರೇಶ್, ಗ್ರೇಡ್-2 ತಹಶೀಲ್ದಾರ್ ಎಂ. ಪ್ರತಿಭಾ, ಶಿರಸ್ತೇದಾರ್ ರೇಖಾ, ಉಪ ತಹಶೀಲ್ದಾರ್ ಅನ್ನದಾನೇಶ ಬಿ. ಪತ್ತಾರ್, ಸಿಬ್ಬಂದಿ ಹಾಗೂ ಸಾರ್ವಜನಿಕರಿದ್ದರು.


**ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು JMFC ದಾವಣಗೆರೆ.**

**ಅಸಲು ದಾವೆ ನಂ.245/2023**

ವಾದಿ : ಕರ್ನಾಟಕ ಬ್ಯಾಂಕ್ ಲಿ., - ವಿರುದ್ಧ- ಪ್ರತಿವಾದಿ: ಶ್ರೀ ಪ್ರಕಾಶ್. ಟಿ. ಬಿನ್ ನಾಗೇಂದ್ರ ರಾವ್, ವಯಸ್ಸು ಸುಮಾರು 40 ವರ್ಷ. ವಾಸ: ಡೋರ್ ನಂ.293, ಬಿಐಇಟಿ ರಸ್ತೆ, ಆಂಜನೇಯ ಬಡಾವಣೆ, ದಾವಣಗೆರೆ- 577004.

ಹೆಚ್ಚುವರಿ ವಿಳಾಸ : ಡೋರ್ ನಂ.730, 4ನೇ ಮುಖ್ಯರಸ್ತೆ, ಬಿಐಇಟಿ ರಸ್ತೆ, ಆಂಜನೇಯ ಬಡಾವಣೆ ದಾವಣಗೆರೆ-577004.

**ಆದೇಶ 5 ನಿಯಮ 20 ರ ಸಿವಿಲ್ ಪ್ರಕ್ರಿಯಾ ಸಂಹಿತೆ ಪ್ರಕಾರ ಪ್ರತಿವಾದಿಗೆ ಸಮನ್ಸ್**

ಈ ಮೇಲ್ಕಂಡ ಕೇಸನ್ನು ವಾದಿಯು ಪ್ರತಿವಾದಿಯರ ವಿರುದ್ಧ ರೂ.2,99,654/-ಗಳಿಗೆ ಹಣ ವಸೂಲಾತಿ ಗಾಗಿ ತಮ್ಮ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ನಿಮ್ಮ ಹಾಜರಾತಿಗಾಗಿ ಘನ ನ್ಯಾಯಾಲಯ ದಿನಾಂಕ 10.02.2025ರಂದು ಮುದ್ದತ್ತನ್ನು ಹಾಜರಾತಿಗಾಗಿ ಘನ ನ್ಯಾಯಾಲಯವು ನಿಗದಿಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕ ವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಬೆಳಿಗ್ಗೆ 11:00 ಘಂಟೆಗೆ ಹಾಜರಾಗಿ ನಿಮ್ಮ ತಕರಾರು ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ದಾವೆಯನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.

ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿ: 13.12.24ರಂದು ನೀಡಲಾಗಿದೆ.

ವಾದಿ ಪರ ವಕೀಲರು, (ಎ.ಎಂ. ಹೆಗಡೆ), ದಾವಣಗೆರೆ, ದಿನಾಂಕ : 02.12.2024

ನ್ಯಾಯಾಲಯದ ಆದೇಶದ ಮೇರೆಗೆ, ಸಹಿ/- ಶಿರಸ್ತೇದಾರರು, ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ದಾವಣಗೆರೆ.





**ಹಾರ್ದಿಕ ಅಭಿನಂದನೆಗಳು**

ಇಂದು ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾದ

**ಮಾಜಿ ಮೇಯರ್ ಎಸ್.ಟಿ ವೀರೇಶ್**


ಅವರಿಗೆ ಹಾರ್ದಿಕ ಅಭಿನಂದನೆಗಳು.

**ವರುಣ್ ಚಕ್ರವರ್ತಿ**

ಚಕ್ರವರ್ತಿ ರಿಯಲ್ ಎಸ್ಟೇಟ್ ಮಾಲೀಕರು



**ಅಭಿನಂದನೆಗಳು**





ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮಾಜಿ ಮೇಯರ್ ಮತ್ತು ಸ್ವಾಮಿ ವಿವೇಕಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರ ನಿಯಮಿತ ಅಧ್ಯಕ್ಷರಾದ **ಶ್ರೀ ಎಸ್.ಟಿ. ವೀರೇಶ್** ಅವರಿಗೂ ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಕುಕ್ಕವಾಡ ಶ್ರೀ ಆಂಜನೇಯ ಸೌಹಾರ್ದ ಸಹಕಾರ ಸಂಘ ನಿಯಮಿತ ಅಧ್ಯಕ್ಷರಾದ **ಶ್ರೀ ರುದ್ರಗೌಡ** ಇವರಿಗೆ **ಒಕ್ಕೂಟದ ಎಲ್ಲಾ ನಿರ್ದೇಶಕರುಗಳಿಗೂ** ಹಾರ್ದಿಕ ಅಭಿನಂದನೆಗಳು.

ಅಧ್ಯಕ್ಷರು, ಉಪಾಧ್ಯಕ್ಷರು, ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳು

**ಸನ್ಮತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ**

ನಂ. 712, ಮೊದಲನೇ ಮಹಡಿ, ಮಂಡಿಪೇಟೆ, ದಾವಣಗೆರೆ-577 001.



RELIANCE

**ಖಾಲಿ ಇರುವ ಹುದ್ದೆಗಳಿಗೆ ಅರ್ಜಿ ಆಹ್ವಾನ**



**ಕೆಲಸಕ್ಕೆ ಬೇಕಾಗಿದ್ದಾರೆ**

ಲೈಫ್ ಪ್ಲಾನಿಂಗ್ ಆಫೀಸರ್

LIFE PLANNING OFFICER

ಮಹಿಳೆಯರಿಗೆ ಮಾತ್ರ...

ONLY FOR LADIES

* ಸಂಬಳ ತಿಂಗಳಿಗೆ ರೂ. 14,000 ದಿಂದ 18,000 (ಇಎಸ್‌ಐ,ಪಿಎಫ್ ಸೌಲಭ್ಯವಿರುತ್ತದೆ.)
* ವಯಸ್ಸು 30 ವರ್ಷದಿಂದ 45 ವರ್ಷದವರಿಗೆ ಮಾತ್ರ
* ವಿದ್ಯಾರ್ಹತೆ : ಯಾವುದೇ ಪದವೀಧರರು (Any Degree)
* ಕಂಪನಿಯ ಆನ್ ರೋಲ್, ನಿಗದಿತ ಸಂಬಳದ, ಖಾಯಂ ಹುದ್ದೆಯಾಗಿರುತ್ತದೆ. (Fixed Salary, Permanent Job)

**BSC AVENUE**

2nd floor, AVK College Road, Opp. : Chetana Hotel Davangere. Above State bank of India.

Ph. : 98440 98800, 98864 57755

# 18ನೇ ವರ್ಷದ ಪುಣ್ಯಸ್ಮರಣೆ



## ದಿ|| ಬಿ.ಎಸ್. ಜಯಂಧರ್ (ಅಪ್ಪಾಜಿ)

ಜನನ : 26-06-1956    ನಿಧನ : 11-01-2007

" ಬದುಕು ಎಂದರೆ ನದಿಯ ಹಾಗೆ ಕೊನೆಯಿಲ್ಲದ ಪಯಣ
ಯಾವುದೂ ನಮ್ಮ ಜೊತೆ ಶಾಶ್ವತವಾಗಿ ಉಳಿಯುವುದಿಲ್ಲ
ಉಳಿಯುವುದು ಒಂದೇ ಅದುವೇ ನೆನಪುಗಳು ಮಾತ್ರ.
ನಿಮ್ಮ ಆದರ್ಶ ಮತ್ತು ಆಶೀರ್ವಾದ ಶಾಶ್ವತವಾಗಿ ನಮ್ಮ ಮೇಲಿರಲಿ.

ನಿಮ್ಮ ನೆನಪಿನಲ್ಲಿ ಪಯಣಿಸುತ್ತಿರುವ : ಪುತ್ರ - ಅಭಿಷೇಕ್ ಬೇತೂರು, ಸೊಸೆ - ಶ್ರೀಮತಿ ಶ್ವೇತ ಅಭಿಷೇಕ್
ಮೊಮ್ಮಗಳು - ನಿಧಿ ಬೇತೂರು, ಮೊಮ್ಮಗ : ಸಮರ್ಥ್ ಬೇತೂರು
ಹೆಚ್. ಆರ್. ಬೇತೂರ್, ವಿಜಯಲಕ್ಷ್ಮಿ ರಸ್ತೆ, ಹೆಚ್. ಆರ್. ಬೇತೂರ್ ಟ್ರೇಡರ್ಸ್, ಮಂಡಿಪೇಟೆ
ಬೇತೂರ್ ಕಮ್ಯೂನಿಕೇಷನ್ಸ್ , ಪಿ.ಜೆ. ಬಡಾವಣೆ, ಬೇತೂರ್ ಎಂಟರ್‌ಪ್ರೈಸಸ್, ನಿಜಲಿಂಗಪ್ಪ ಬಡಾವಣೆ,
ಬೇತೂರು ಕುಟುಂಬವರ್ಗ ಹಾಗೂ ಬಂಧು-ಮಿತ್ರರು

# ಹಾರ್ದಿಕ ಅಭಿನಂದನೆಗಳು



ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮಾಜಿ ಮೇಯರ್
ಮತ್ತು ಅಧ್ಯಕ್ಷರು, ಸ್ವಾಮಿ ವಿವೇಕಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರ ನಿ.,
ಹಾಗೂ ನಮ್ಮ ಆತ್ಮೀಯರು ಆದ **ಶ್ರೀ ಎಸ್.ಟಿ. ವೀರೇಶ್**
ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ **ಶ್ರೀ ರುದ್ರಗೌಡ,**
ಅಧ್ಯಕ್ಷರು, ಶ್ರೀ ಆಂಜನೇಯ ಸೌಹಾರ್ದ ಸಹಕಾರ ಸಂಘ ನಿ., ಕುಕ್ಕವಾಡ.
**ಇವರಿಗೆ ಹಾರ್ದಿಕ ಅಭಿನಂದನೆಗಳು.**
ಮುಂದಿನ ರಾಜಕೀಯ ಜೀವನದಲ್ಲಿ ಯಶಸ್ಸು ಸಿಗಲೆಂದು ಶುಭ ಹಾರೈಸುವವರು.



## ಎಂ.ಆರ್. ಪ್ರಭುದೇವ್

ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ
ಸಹಕಾರ ಭಾರತಿ
ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ
ಸಂಯುಕ್ತ ಸಹಕಾರಿ ನಿಯಮಿತ
ಬೆಂಗಳೂರು.

# ಜಗಳೂರಿನಲ್ಲಿ ನಡೆಯುವ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು





ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು,
ಹರಿಹರ ಎಸ್.ಜೆ.ವಿ.ಪಿ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು, ಪ್ರಗತಿಪರ, ಸಾಂಸ್ಕೃತಿಕ ಚಿಂತಕರೂ ಆದ
ಪ್ರೀತಿಯ ಸಹೋದರ ಚನ್ನಗಿರಿ ತಾಲ್ಲೂಕಿನ ಆಗರಬನ್ನಿಹಟ್ಟಿಯ **ಡಾ. ಎ.ಬಿ. ರಾಮಚಂದ್ರಪ್ಪ** ಅವರ
ಸರ್ವಾಧ್ಯಕ್ಷತೆಯಲ್ಲಿ **ಜಗಳೂರು ಪಟ್ಟಣದಲ್ಲಿ ಜನವರಿ 11 ಮತ್ತು 12 ರಂದು (ಇಂದು ಮತ್ತು ನಾಳೆ)**
ಅತ್ಯಂತ ವಿಜೃಂಭಣೆಯಿಂದ ಜರುಗಲಿರುವ **ದಾವಣಗೆರೆ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ**
ಹಾರ್ದಿಕ ಶುಭಾಶಯಗಳು.

ಶುಭ ಕೋರುವವರು



## ಡಾ|| ಪ್ರಹ್ಲಾದ ಎನ್.ಬಿ

ಎಂ.ಬಿ.ಬಿ.ಎಸ್ (ಜೆ.ಜೆ.ಎಂ.ಎಂ.ಸಿ, ದಾವಣಗೆರೆ), ಎಂಎಸ್ (ಪಿ.ಜಿ.ಐ.ಎಂ.ಇ.ಆರ್, ಚಂಡೀಗಢ).

ಸ್ನಾತಕೋತ್ತರ ಪದವಿಗಳು: ಎಂ.ಬಿಎ (ಬಿಟ್ಸ್, ಪಿಲಾನಿ) , (ಎಮ್. ಐ. ಟಿ, ಅಮೇರಿಕಾ ),
(ಐ.ಐ. ಎಮ್, ಲಕ್ನೋ), (ಐ,ಐ,ಎಮ್, ಕೋಝಿಕ್ಕೋಡ್), (ಐ,ಐ,ಎಸ್.ಸಿ, ಬೆಂಗಳೂರು).

ಹಿರಿಯ ಪ್ರಾಧ್ಯಾಪಕರು ಮತ್ತು ನಿಕಟ ಪೂರ್ವ ಮುಖ್ಯಸ್ಥರು, ಕಿವಿ, ಮೂಗು, ಮತ್ತು ಗಂಟಲು ವಿಭಾಗ,
ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ, ಚಿತ್ರದುರ್ಗ.

ಹಿರಿಯ ತಜ್ಞ ವೈದ್ಯರು ಮತ್ತು ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಕಿವಿ, ಮೂಗು, ಗಂಟಲು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ,
ಧವಳಗಿರಿ ಬಡಾವಣೆ, 2ನೇ ಹಂತ, ಭೀಮಸಮುದ್ರ ರಸ್ತೆ, ಚಿತ್ರದುರ್ಗ.

## ಕರ್ನಾಟಕ ಕಿವಿ, ಮೂಗು, ಗಂಟಲು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ,

ಧವಳಗಿರಿ ಬಡಾವಣೆ, 2ನೇ ಹಂತ, ಭೀಮಸಮುದ್ರ ರಸ್ತೆ, ಚಿತ್ರದುರ್ಗ - 577501

ಧ್ಯೇಯಗಳು: ಅತ್ಯುತ್ತಮ ರೋಗಿ ಸೇವೆ, ಸಂಶೋಧನೆ ಮತ್ತು ಜ್ಞಾನ ದಾಸೋಹ

ಕರ್ನಾಟಕ ಕಿವಿ, ಮೂಗು, ಗಂಟಲು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವು ಕರ್ನಾಟಕದ ಚಿತ್ರದುರ್ಗದಲ್ಲಿರುವ ಸುಸ್ಥಾಪಿತ ವೈದ್ಯಕೀಯ ಸೌಲಭ್ಯವಾಗಿದೆ. ಕಿವಿ, ಮೂಗು, ಗಂಟಲು - ತಲೆ ಮತ್ತು ಕತ್ತಿನ ಶಸ್ತ್ರಚಿಕಿತ್ಸೆಯಲ್ಲಿ ತನ್ನ ಶ್ರೇಷ್ಠತೆಗೆ ಹೆಸರುವಾಸಿಯಾಗಿದೆ, ಆಸ್ಪತ್ರೆಯು ಆಧುನಿಕ ತಂತ್ರಜ್ಞಾನವನ್ನು ಹೊಂದಿದೆ ಮತ್ತು ಉತ್ತಮ ಗುಣಮಟ್ಟದ ಆರೈಕೆಯನ್ನು ಒದಗಿಸಲು ಮೀಸಲಾಗಿರುವ ಅನುಭವಿ ವೃತ್ತಿಪರ ಸಿಬ್ಬಂದಿಯನ್ನು ಹೊಂದಿದೆ. ಈ ಸೌಲಭ್ಯವು ಕಿವಿ, ಮೂಗು, ಗಂಟಲು ಮತ್ತು ಸಂಬಂಧಿತ ಪರಿಸ್ಥಿತಿಗಳಿಗೆ ರೋಗನಿರ್ಣಯ ಮತ್ತು ಚಿಕಿತ್ಸಾ ಸೇವೆಗಳ ಸಮಗ್ರ ಶ್ರೇಣಿಯನ್ನು ನೀಡುತ್ತದೆ, ರೋಗಿ ಕೇಂದ್ರಿತ ಮತ್ತು ಸಾಕ್ಷ್ಯ ಆಧಾರಿತ ಆರೈಕೆಯನ್ನು ಖಾತ್ರಿಗೊಳಿಸುತ್ತದೆ.




ಆಸ್ಪತ್ರೆಯು ಶೈಕ್ಷಣಿಕ ಮತ್ತು ಸಂಶೋಧನಾ ಉತ್ಕೃಷ್ಟತೆಗೆ ಬದ್ಧವಾಗಿದೆ, ಕಿವಿ, ಮೂಗು ಮತ್ತು ಗಂಟಲಿನ ಕ್ಷೇತ್ರದಲ್ಲಿ ಜ್ಞಾನವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ವಿವಿಧ ಶೈಕ್ಷಣಿಕ ಉಪಕ್ರಮಗಳು ಮತ್ತು ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಇದರ ಮಾಸಿಕ ಸುದ್ದಿ ಪತ್ರ ಮತ್ತು ಬಳಕೆದಾರ ಸ್ನೇಹಿ ವೆಬ್‌ಸೈಟ್ ರೋಗಿಗಳಿಗೆ ಮತ್ತು ವೈದ್ಯಕೀಯ ಸಮುದಾಯಕ್ಕೆ ಇತ್ತೀಚಿನ ಬೆಳವಣಿಗೆಗಳು ಮತ್ತು ಸೇವೆಗಳ ಬಗ್ಗೆ ತಿಳಿಸುತ್ತದೆ. ನಂಬಿಕೆ ಮತ್ತು ನಾವೀನ್ಯತೆಗೆ ಖ್ಯಾತಿಯನ್ನು ಹೊಂದಿರುವ ಕರ್ನಾಟಕ ಕಿವಿ, ಮೂಗು, ಗಂಟಲು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವು ಈ ಪ್ರದೇಶದಲ್ಲಿ ಗುಣಮಟ್ಟದ ಆರೋಗ್ಯ ರಕ್ಷಣೆಗೆ ಮಾನದಂಡವಾಗಿದೆ.

ಕರ್ನಾಟಕ ಅತ್ಯಾಧುನಿಕ ವಾಕ್ ಮತ್ತು ಶ್ರವಣ ಕೇಂದ್ರ 29, ಬಸವ ಭವನ, ಧವಳಗಿರಿ ಬಡಾವಣೆ, 2ನೇ ಹಂತ, ಭೀಮಸಮುದ್ರ ರಸ್ತೆ, ಚಿತ್ರದುರ್ಗ

### ದೊರಕುವ ಸೌಲಭ್ಯಗಳು:

೧. ಕಿವಿಯ ತೊಂದರೆಗಳಿಗೆ ಸೂಕ್ಷ್ಮ ಶಸ್ತ್ರಚಿಕಿತ್ಸೆ
೨. ಮೂಗಿನ ತೊಂದರೆಗಳಿಗೆ ಅಂತರ್ ದರ್ಶಕ ಶಸ್ತ್ರಚಿಕಿತ್ಸೆ
೩. ಗಂಟಲಿನ ತೊಂದರೆಗಳಿಗೆ ಸೂಕ್ಷ್ಮ ಶಸ್ತ್ರಚಿಕಿತ್ಸೆ
೪. ಧ್ವನಿಯ ತೊಂದರೆ ಮತ್ತು ಧ್ವನಿ ಬದಲಾವಣೆ ಚಿಕಿತ್ಸೆ
೫. ತಲೆ ಮತ್ತು ಕುತ್ತಿಗೆಯ ಅರ್ಬುದಕ್ಕೆ ಶಸ್ತ್ರಚಿಕಿತ್ಸೆ
೬. ಮೂಗಿನ ಮತ್ತು ಮುಖದ ಸೌಂದರ್ಯವರ್ಧಕ ಶಸ್ತ್ರಚಿಕಿತ್ಸೆ
೭. ಗೊರಕೆ ಮತ್ತು ನಿದ್ದೆಯಲ್ಲಿ ಶ್ವಾಸಸ್ತಂಬನಕ್ಕೆ ಶಸ್ತ್ರಚಿಕಿತ್ಸೆ
೮. ತಲೆ ಸುತ್ತುವಿಕೆ ಮತ್ತು ಕಿವಿಯಲ್ಲಿನ ಅಹಿತಕರ ಶಬ್ದಕ್ಕೆ ಚಿಕಿತ್ಸೆ
೯. ಕೃತಕ ಒಳ ಕಿವಿಯ ಅಳವಡಿಕೆ (ಕಾಕ್ಲಿಯರ್ ಇಂಪ್ಲಾಂಟ್) ಮತ್ತು ನಂತರದ ವಾಕ್ ತರಬೇತಿ

### ದೊರಕುವ ಸೌಲಭ್ಯಗಳು:

೧. ಹುಟ್ಟಿದ ಹಸುಗೂಸುಗಳ ಶ್ರವಣ ಶಕ್ತಿ ಪರೀಕ್ಷೆ
೨. ಮಕ್ಕಳ ಮತ್ತು ಹಿರಿಯರ ಎಲ್ಲಾ ರೀತಿಯ ಶ್ರವಣ ಶಕ್ತಿ ಪರೀಕ್ಷೆ
೩. ತಲೆಸುತ್ತುವಿಕೆ ಕಾರಣ ಕಂಡು ಹಿಡಿಯಲು ವಿಶೇಷ ಪರೀಕ್ಷೆಗಳು
೪. ಎಲ್ಲಾ ರೀತಿಯ ಶ್ರವಣ ಸಾಧನ ಅಳವಡಿಕೆ
೫. ಧ್ವನಿ ತೊಂದರೆಗಳ ಪರೀಕ್ಷೆ, ಶುಶೂಶೆ ಮತ್ತು ತರಬೇತಿ
೬. ತೊದಲುವಿಕೆ, ಉಗ್ಗುವಿಕೆ, ಮತ್ತಿತರೆ ವಾಕ್ ತೊಂದರೆಗಳ ಪರೀಕ್ಷೆ, ಶುಶ್ರೂಶೆ ಮತ್ತು ತರಬೇತಿ.

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas